ತುಮಕೂರು ವಿಶ್ವವಿದ್ಯಾನಿಲಯ

# ವಿಶ್ವವಿದ್ಯಾನಿಲಯ ಕಲಾ ಕಾಲೇಜು

(ನ್ಯಾಕ್ ಸಂಸ್ಥೆಯ 'ಎ' ಶ್ರೇಣೀಕೃತ ಕಾಲೇಜು)

TUMKUR UNIVERSITY

# UNIVERSITY COLLEGE OF ARTS

(Re-Accredited by NAAC with : 'A' Grade)




## ವಿವರಣ ಪತ್ರ
## PROSPECTUS

2022-23



**ಪ್ರೊ. ಕೇಶವ**
ಕುಲಪತಿಗಳು



ಪ್ರೊ. ಕೆ. ಶಿವಚಿತ್ತಪ್ಪ
ಕುಲಸಚಿವರು



ಪ್ರೊ. ನಿರ್ಮಲ್ ರಾಜು
ಕುಲಸಚಿವರು (ಪರೀಕ್ಷಾಂಗ)



ಪ್ರೊ. ಪಿ. ಪರಮಶಿವಯ್ಯ
ಹಣಕಾಸು ಅಧಿಕಾರಿಗಳು



ಪ್ರೊ. ಬಿ.ಕರಿಯಣ್ಣ
ಪ್ರಾಂಶುಪಾಲರು



ಪ್ರೊ. ಹರಿಪ್ರಸಾದ್ ಟಿ. ಎನ್.
ಉಪ ಪ್ರಾಂಶುಪಾಲರು

# ಪ್ರಸ್ತಾವನೆ

ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಆಗಿರುವಂತಹ ವಿಶ್ವವಿದ್ಯಾನಿಲಯ ಕಲಾಕಾಲೇಜು ಕರ್ನಾಟಕರಾಜ್ಯದ ಶೈಕ್ಷಣಿಕ ಇತಿಹಾಸದಲ್ಲಿ ತನ್ನದೇ ಆದಂತಹ ವಿಶಿಷ್ಟವಾದ ಛಾಪನ್ನು ಮೂಡಿಸಿದೆ. ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಕಾಲೇಜು ರಾಷ್ಟ್ರೀಯ ಮೌಲ್ಯೀಕರಣ ಹಾಗೂ ಮಾನ್ಯತಾ ಪರಿಷತ್ತಿನಿಂದ (ನ್ಯಾಕ್) 'ಎ' ಶ್ರೇಣಿಯನ್ನು ಪಡೆದಿದ್ದು, ಸದ್ಯ ಪುನರ್ ಮೌಲ್ಯೀಕರಣಕ್ಕೆ ಸರ್ವರೀತಿಯಲ್ಲಿ ಸಿದ್ಧವಾಗಿದೆ.

1940ರಲ್ಲಿ ಇಂಟರ್‌ಮೀಡಿಯೆಟ್ ಕಾಲೇಜು ರೂಪದಲ್ಲಿ ಪ್ರಾರಂಭಗೊಂಡ ಈ ಕಾಲೇಜು, ಆಡಳಿತಾತ್ಮಕಕಾರಣಗಳಿಂದಾಗಿ 1973ರಲ್ಲಿ ವಿಜ್ಞಾನ ಕಾಲೇಜಿನಿಂದ ಬೇರ್ಪಡೆಗೊಂಡು ಸರ್ಕಾರಿ ಕಲಾ ಕಾಲೇಜು ಎಂಬ ಹೆಸರಿನೊಂದಿಗೆ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿತು. ತುಮಕೂರು ವಿಶ್ವವಿದ್ಯಾನಿಲಯದ ಸ್ಥಾಪನೆಯ ತರುವಾಯ 2010ರಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಪರಿವರ್ತನೆಗೊಂಡು ವಿಶ್ವವಿದ್ಯಾನಿಲಯ ಕಲಾ ಕಾಲೇಜು ಎಂದು ಮರು ನಾಮಕರಣಗೊಂಡಿದೆ.

ತುಮಕೂರು ವಿಶ್ವವಿದ್ಯಾನಿಲಯದ ಸಮರ್ಥ ಮಾರ್ಗದರ್ಶನ, ದಕ್ಷ ಆಡಳಿತ, ಗುಣಮಟ್ಟದ ಕಲಿಕೆ, ಎಲ್ಲಾ ವಿಭಾಗಗಳಲ್ಲಿಯೂ ಖಾಯಂ ಬೋಧಕ ವರ್ಗ, ಪ್ರಾಯೋಗಿಕ ಕಲಿಕೆಗೆ ಹೆಚ್ಚಿನ ಉತ್ತೇಜನ, ಉತ್ತಮ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಾತಾವರಣ, ಶಿಸ್ತುಬದ್ಧ ಹಾಗೂ ಪ್ರತಿಭಾವಂತ ವಿದ್ಯಾರ್ಥಿವೃಂದ ಇತ್ಯಾದಿಗಳಿಂದ ವಿಶ್ವವಿದ್ಯಾನಿಲಯ ಕಲಾ ಕಾಲೇಜು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟಸ್ಥಾನವನ್ನು ತನ್ನದಾಗಿಸಿಕೊಂಡಿದೆ. ಸುಸಜ್ಜಿತವಾದ ಗ್ರಂಥಾಲಯ, ಶೌಚಾಲಯ, ವಿಶಾಲವಾದ ಕ್ರೀಡಾಂಗಣ, ಹಸಿರು ಕ್ಯಾಂಪಸ್, ಉತ್ತಮ ಗುಣಮಟ್ಟದ ತರಗತಿ ಕೊಠಡಿಗಳು ಹಾಗೂ ಬೋಧನೋಪಕರಣಗಳು ಕಾಲೇಜಿನ ವೈಶಿಷ್ಟ್ಯಗಳಾಗಿವೆ. ಮೂಲ ಸೌಕರ್ಯಗಳ ಅಭಿವೃದ್ಧಿಯಲ್ಲಿ ಕಾಲೇಜು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಪ್ರತಿ ತರಗತಿಯಲ್ಲಿಯೂ ಸ್ಮಾರ್ಟ್ ಬೋರ್ಡ್, ಎಲ್.ಸಿ.ಡಿ.ಪ್ರೊಜೆಕ್ಟರ್ ಅಳವಡಿಸಲಾಗಿದ್ದು ಬೋಧಕರು ಮತ್ತು ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನದ ಸದುಪಯೋಗ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಕಾರ್ಯನಿರತವಾಗಿದೆ. 30 ಕೆವಿ ಪವರ್ ಬ್ಯಾಕಪ್ ಸೌಲಭ್ಯ ಕಲ್ಪಿಸಲಾಗಿದೆ.

ಅತ್ಯುನ್ನತ ಮಟ್ಟದ ಬೋಧನೆಯೊಂದಿಗೆ ಮಾನವೀಯ ಮೌಲ್ಯಗಳ ವರ್ಧನೆ, ದೇಶೀಯ ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಜ್ಞಾನವಿಕಾಸಕ್ಕೆ ಪೂರಕವಾದ ಪಠ್ಯಪೂರಕ ಚಟುವಟಿಕೆಗಳ ಆಯೋಜನೆಯಿಂದ ವಿಶ್ವವಿದ್ಯಾನಿಲಯ ಕಲಾ ಕಾಲೇಜು ಅತ್ಯಂತ ವಿಶಿಷ್ಟವಾದ ಸ್ಥಾನವನ್ನು ತನ್ನದಾಗಿಸಿಕೊಂಡಿದೆ.

ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾಗುವಂತಹ ವಿವಿಧ ವೇದಿಕೆಗಳು, ಪಠ್ಯೇತರ ಚಟುವಟಿಕೆಗಳಲ್ಲಿಯೂ ವಿದ್ಯಾರ್ಥಿಗಳು ಸದಾ ಕ್ರಿಯಾಶೀಲರಾಗುವಂತೆ ನೋಡಿಕೊಳ್ಳುವ ಹಲವು ಬಗೆಯ ಕಾರ್ಯಕ್ರಮಗಳು, ಕ್ರೀಡಾ ಚಟುವಟಿಕೆಗಳು, ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸಹಿಷ್ಣುತೆ, ಸಹಬಾಳ್ವೆಗಳನ್ನೂ ಪ್ರೇರೇಪಿಸುವಂತಹ ಅಚ್ಚುಕಟ್ಟಾದ ಸುಂದರ ಪರಿಸರ ವಿಶ್ವವಿದ್ಯಾನಿಲಯ ಕಲಾಕಾಲೇಜಿಗೆ ಹೆಚ್ಚಿನ ಮೆರುಗನ್ನು ನೀಡಿವೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಕಲಾ ಕಾಲೇಜಿನ ವಿವಿಧ ವಿಭಾಗಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರಸಂಕಿರಣಗಳು ಹಾಗೂ ಕಾರ್ಯಾಗಾರಗಳನ್ನು ಆಯೋಜಿಸುತ್ತಾ ಬಂದಿವೆ. 'ಕಲಾಸಿರಿ' ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಿ, ವಿದ್ಯಾರ್ಥಿಗಳಲ್ಲಿನ ಸುಪ್ತಪ್ರತಿಭೆಯನ್ನು ಹೊರತರುವ ಪ್ರಯತ್ನದಲ್ಲಿ ನಿರಂತರವಾಗಿ ಕ್ರಿಯಾಶೀಲವಾಗಿದೆ.

ಕಾಲೇಜಿನ ಶೈಕ್ಷಣಿಕ ಸಾಧನೆಯೂ ಅಪೂರ್ವವಾಗಿದೆ. ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗಳಲ್ಲಿ ಕಾಲೇಜಿನ ಅನೇಕ ವಿದ್ಯಾರ್ಥಿಗಳು ಪ್ರತಿವರ್ಷವೂ ರ್‍ಯಾಂಕ್ ಗಳನ್ನು ತಮ್ಮದಾಗಿಸಿಕೊಂಡು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸುತ್ತಾ ಬಂದಿದ್ದಾರೆ ಮತ್ತು ಈ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಸಂಯೋಜಿತ ಹಾಗೂ ಘಟಕ ಕಾಲೇಜು ಪಂಕ್ತಿಯಲ್ಲಿ ಅಗ್ರಸ್ಥಾನದಲ್ಲಿದೆ. ಅಧ್ಯಾಪಕವೃಂದವೂ ಸಂಶೋಧನೆಯಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿರುವುದರೊಂದಿಗೆ ಕಾಲೇಜಿನ ಪ್ರಗತಿಯಲ್ಲಿ ಗುಣಾತ್ಮಕವಾದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಕಾಲೇಜು ಕ್ಯಾಂಪಸ್ ಸಂಪೂರ್ಣ ವೈ ಫೈ ಸೌಲಭ್ಯ ಹೊಂದಿದೆ ಹಾಗೂ ಕಾಲೇಜಿನಲ್ಲಿ ಸಿ.ಸಿ.ಕ್ಯಾಮೆರಾ ಅಳವಡಿಸಿಕೊಳ್ಳಲಾಗಿದ್ದು ವಿದ್ಯಾರ್ಥಿಗಳ ವಿಶೇಷವಾಗಿ ವಿದ್ಯಾರ್ಥಿನಿಯರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ.

ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ರಂಗದಲ್ಲಿಯೂ ವಿದ್ಯಾರ್ಥಿಗಳು ಗಣನೀಯವಾದ ಸಾಧನೆಯನ್ನು ಮಾಡಿದ್ದು, ಎನ್.ಎಸ್.ಎಸ್., ಎನ್.ಸಿ.ಸಿ. ರೆಡ್ ಕ್ರಾಸ್, ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ವಿಶ್ವವಿದ್ಯಾನಿಲಯ ಕಲಾಕಾಲೇಜಿನ ಸಾಮಾಜಿಕ ಬದ್ಧತೆಯನ್ನು ಬಿಂಬಿಸುತ್ತಿವೆ.

ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಸರ್ಕಾರದಲ್ಲಿ ಹಾಗೂ ಖಾಸಗೀವಲಯದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿದ್ದಾರೆ.

ವಿಶ್ವವಿದ್ಯಾನಿಲಯ ಕಲಾ ಕಾಲೇಜು ರಾಷ್ಟ್ರೀಯ ಶಿಕ್ಷಣನೀತಿ 2020 ಯನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದು ಅತ್ಯಂತ ಹೆಮ್ಮೆಯ ವಿಚಾರ.

**ಪ್ರೊ. ಬಿ. ಕರಿಯಣ್ಣ**
**ಪ್ರಾಂಶುಪಾಲರು**

.

ವಿಶ್ವವಿದ್ಯಾನಿಲಯ ಕಲಾ ಕಾಲೇಜು
ತುಮಕೂರು

## 2021-22 ಸಾಲಿನ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು



ಕಾರ್ತಿಕ್ ಟಿ.ಎಸ್.
ಬಿ.ಕಾಂ.
ತೃತೀಯ ರ್‍ಯಾಂಕ್



ರಶ್ಮಿ ಎನ್.
ಬಿ.ಕಾಂ.
ನಾಲ್ಕನೇ ರ್‍ಯಾಂಕ್



ಶುಭಶ್ರೀ ಪಿ.ಎಸ್.
ಬಿ.ಕಾಂ.
ಏಳನೇ ರ್‍ಯಾಂಕ್



ಭಾಗ್ಯ ಮಾನೆ
ಬಿ.ಕಾಂ.
ಒಂಭತ್ತನೇ ರ್‍ಯಾಂಕ್



ಸಾಗರ್ ಎಂ
ಬಿ.ಎ.
ನಾಲ್ಕನೇ ರ್‍ಯಾಂಕ್



ಪುನಿತ್ ಕುಮಾರ್ ಕೆ.ಆರ್.
ಬಿ.ಎ.
ಒಂಭತ್ತನೇ ರ್‍ಯಾಂಕ್




ಪ್ರಮೋದ್ ಎ.ಆರ್.
ಬಿ.ಬಿ.ಎಂ.
ಐದನೇ ರ್‍ಯಾಂಕ್

## ರಾಷ್ಟ್ರೀಯ ಶಿಕ್ಷಣ ನೀತಿ

ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರುವ ಉದ್ದೇಶದಿಂದ ಡಾ.ಕಸ್ತೂರಿರಂಗನ್ ಆಯೋಗ ನೀಡಿರುವ ರಾಷ್ಟ್ರೀಯ ಶಿಕ್ಷಣನೀತಿ 2020 ಯನ್ನು ಭಾರತಸರ್ಕಾರವು ಜಾರಿಗೆ ತಂದಿದ್ದು, ಈ ರಾಷ್ಟ್ರೀಯ ಶಿಕ್ಷಣನೀತಿಯನ್ನು ಅನುಷ್ಠಾನಗೊಳಿಸಿರುವ ಮೊದಲ ರಾಜ್ಯವೆಂಬ ಕೀರ್ತಿಗೆ ಕರ್ನಾಟಕ ಭಾಜನವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಕಟಿಬದ್ಧವಾಗಿರುವ ತುಮಕೂರು ವಿಶ್ವವಿದ್ಯಾನಿಲಯವು ತನ್ನ ಘಟಕ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಟಾನಕ್ಕೆ ಕ್ರಮ ತೆಗೆದುಕೊಂಡಿರುವ ವಿಶ್ವವಿದ್ಯಾನಿಲಯಗಳಲ್ಲಿ ಮೊದಲ ಸ್ಥಾನದಲ್ಲಿದೆ.

1. ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಇದುವರೆಗೆ ಮೂರು ವರ್ಷಗಳ ಅವಧಿಯಾಗಿದ್ದ ಸ್ನಾತಕ ಪದವಿ ಇನ್ನು ಮುಂದೆ ನಾಲ್ಕು ವರ್ಷಗಳ ಅಧ್ಯಯನದ ಕೋರ್ಸ್ ಆಗಲಿದ್ದು, ಮೊದಲ ವರ್ಷವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿ ಸರ್ಟಿಫಿಕೇಟ್, ಎರಡನೆಯ ವರ್ಷಕ್ಕೆ ಡಿಪ್ಲೋಮೊ, ಮೂರನೆಯ ವರ್ಷಾಂತ್ಯಕ್ಕೆ ಪದವಿ ಹಾಗೂ ನಾಲ್ಕು ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಆನರ್ಸ್ ಪ್ರಮಾಣಪತ್ರವನ್ನು ಪಡೆದುಕೊಳ್ಳುವ ಅವಕಾಶವಿರುತ್ತದೆ.

2. ಸೂಕ್ಷ್ಮತೆಯನ್ನು ಉತ್ತೇಜಿಸುವ ಹಾಗೂ ಕಲಿಕೆಯ ವಿಷಯದ ಬಗ್ಗೆ ಹೆಚ್ಚಿನ ಪರಿಣತಿಯನ್ನು ವಿದ್ಯಾರ್ಥಿಗಳಿಗೆ ಕಲ್ಪಿಸುವ ದೃಷ್ಟಿಯಿಂದ ಪ್ರಧಾನ ಕಲಿಕಾ ವಿಷಯಗಳನ್ನು ಮೂರರಿಂದ ಎರಡಕ್ಕೆ ಇಳಿಸಲಾಗಿದೆ.

3. ಆಯ್ಕೆ ಮಾಡಿಕೊಳ್ಳುವ ಎರಡು ವಿಷಯಗಳನ್ನು ಸಮಾನ ಪ್ರಾತಿನಿಧ್ಯದೊಂದಿಗೆ ನಾಲ್ಕು ಸೆಮಿಸ್ಟರ್‌ವರೆಗೆ ಅಧ್ಯಯನ ಮಾಡಬಹುದಾಗಿದೆ. ಈ ಸಮಾನ ಪ್ರಾತಿನಿಧ್ಯ ಇಚ್ಛೆಪಟ್ಟಲ್ಲಿ ಐದು ಹಾಗೂ ಆರನೆಯ ಸೆಮಿಸ್ಟರ್‌ಗೂ ವಿಸ್ತರಿಸಬಹುದಾಗಿದೆ ಅಥವಾ ಒಂದು ವಿಷಯವನ್ನು ಮೇಜರ್ ಆಗಿ ಇನ್ನೊಂದು ವಿಷಯವನ್ನು ಮೈನರ್ ಆಗಿಯೂ ತೆಗೆದುಕೊಳ್ಳಬಹುದಾಗಿದೆ. ನಾಲ್ಕನೆಯ ವರ್ಷ ಅಂದರೆ ಏಳು ಅಥವಾ ಎಂಟನೆಯ ಸೆಮಿಸ್ಟರ್‌ನಲ್ಲಿ ಕೇವಲ ಒಂದು ವಿಷಯವನ್ನು ವಿದ್ಯಾರ್ಥಿಗಳು ತಮ್ಮ ಆನರ್ಸ್‌ಗಾಗಿ ಅಧ್ಯಯನ ಮಾಡಲು ಅವಕಾಶವಿರುತ್ತದೆ. ಆನರ್ಸ್ ಪಡೆಯುವ ವಿದ್ಯಾರ್ಥಿಗಳು 20ಕ್ಕೂ ಹೆಚ್ಚು ಪತ್ರಿಕೆಗಳನ್ನು ಅಧ್ಯಯನ ಮಾಡುವ ಕಾರಣದಿಂದಾಗಿ ಪ್ರಾವೀಣ್ಯತೆಗೆ ಅವಕಾಶ ದೊರೆಯಲಿದೆ.

4. ಭಾಷೆಗಳ ಕಲಿಕೆಗೂ ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳಿಗೆ ತಮ್ಮ ಆಯ್ಕೆಯ ಎರಡು ಭಾಷೆಗಳನ್ನು ಅಭ್ಯಸಿಸುವ ಅವಕಾಶವಿರುತ್ತದೆ.

5. ಎಬಿಲಿಟಿ, ವೋಕೆಷನಲ್ ಹಾಗೂ ಸ್ಕಿಲ್‌ಗಳಿಗೆ ಸಂಬಂಧಿಸಿದ ವಿಷಯಗಳನ್ನು ಹೊಸದಾಗಿ ಪರಿಚಯಿಸಲಾಗುತ್ತಿದೆ. ವಿದ್ಯಾರ್ಥಿಗಳು ಜವಾಬ್ದಾರಿಯುತ ನಾಗರೀಕರನ್ನಾಗಿಸುವ ಆಶಯದೊಂದಿಗೆ, ಸಾಮರ್ಥ್ಯವರ್ಧನೆಯ ವಿಷಯಗಳಾಗಿ ಪರಿಸರ ಅಧ್ಯಯನ,ಭಾರತ ಸಂವಿಧಾನಗಳಂತಹ ವಿಷಯಗಳನ್ನು ಇರಿಸಲಾಗಿದೆ. ಇದರೊಂದಿಗೆ ವಿದ್ಯಾರ್ಥಿಯ ವ್ಯಕ್ತಿತ್ವದ ಆರೋಗ್ಯಕರ ವಿಕಾಸಕ್ಕೆ ವೇದಿಕೆಯನ್ನು ಕಲ್ಪಿಸುವ ಉದ್ದೇಶವನ್ನು ರಾಷ್ಟ್ರೀಯ ಶಿಕ್ಷಣ ನೀತಿಯು ಹೊಂದಿದೆ.

6. ಯಾವುದೇ ಕಾರಣದಿಂದಾಗಿ, ಯಾವುದೇ ವರ್ಷದ ಅಂತ್ಯದಲ್ಲಿ ವಿದ್ಯಾರ್ಥಿ ವ್ಯಾಸಂಗ ಮೊಟಕುಗೊಳಿಸಲು ಮತ್ತು ಅನುಕೂಲವಾದಾಗ ನಿಲ್ಲಿಸಿದ ವರ್ಷದಿಂದಲೇ ಮತ್ತೆ ಮುಂದುವರೆಸಲು ಮುಕ್ತ ಅವಕಾಶ ಲಭ್ಯವಾಗಲಿದೆ. ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಅವಧಿಯಲ್ಲಿ ಗಳಿಸುವ ಕ್ರೆಡಿಟ್‌ಗಳು ಅಕಾಡೆಮಿಕ್‌ಬ್ಯಾಂಕ್ ಆಫ್ ಕ್ರೆಡಿಟ್‌ನಲ್ಲಿ ಸಂಗ್ರಹವಾಗುವ ವ್ಯವಸ್ಥೆ ಅಸ್ತಿತ್ವಕ್ಕೆ ಬರಲಿದೆ.

7. ಕಲಿಕೆಯ ವಿಷಯಗಳ ಪೈಕಿ ಡಿಸಿಪ್ಲಿನ್ ಸ್ಪೆಸಿಫಿಕ್ ಕೋರ್ ವಿಷಯಗಳು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಏಕರೂಪವಾಗಿರುವುದರಿಂದ ವಿದ್ಯಾರ್ಥಿ ಒಂದು ವಿಶ್ವವಿದ್ಯಾನಿಲಯದಿಂದ ಇನ್ನೊಂದು ವಿಶ್ವವಿದ್ಯಾನಿಲಕ್ಕೆ ವರ್ಗಾವಣೆ ಪಡೆಯುವ ಪ್ರಕ್ರಿಯೆ ಸುಲಭವಾಗಲಿದೆ.

8. ಈ ಪದ್ಧತಿಯಲ್ಲಿ ಅಂತರ್ ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನಕ್ಕೆ ವಿಶೇಷವಾದ ಪ್ರಾಧಾನ್ಯತೆದೊರೆಯಲಿದೆ.

## ಪ್ರವೇಶ ನಿಯಮಗಳು

ಪ್ರಥಮ ಬಿ.ಎ./ ಬಿ.ಎಸ್.ಡಬ್ಲ್ಯು./ ಬಿ.ಕಾಂ./ ಬಿ.ಬಿ.ಎ/ ಬಿ.ವಿ.ಎ. ಪ್ರವೇಶ ಬಯಸುವ ಅರ್ಹ ವಿದ್ಯಾರ್ಥಿಗಳು **UUCMS** ವೆಬ್‌ಸೈಟ್ ನ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. **ವೆಬ್‌ಸೈಟ್ : https://uucms.karnataka.gov.in**

1. **ಆಧಾರ್ ಕಾರ್ಡ್‌ನೊಂದಿಗೆ ಲಿಂಕ್ ಮಾಡಿರುವಂತೆ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು ಮತ್ತು ಇ-ಮೇಲ್ ಐ.ಡಿ. ಕಡ್ಡಾಯವಾಗಿ ಹೊಂದಿರತಕ್ಕದ್ದು (ಬದಲಾಯಿಸತಕ್ಕದ್ದಲ್ಲ).**
2. ಪ್ರಾಂಶುಪಾಲರು ದೃಢೀಕರಿಸಿರುವ ಅರ್ಹತಾ ಪರೀಕ್ಷೆಯ (ಪಿ.ಯು.ಸಿ) ಅಂಕಪಟ್ಟಿ/ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.
3. ಜನ್ಮ ದಿನಾಂಕ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಪ್ರತಿ.
4. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಅನ್ವಯವಾಗುವವರಿಗೆ).
5. ಹೈದಾರಾಬಾದ್ ಕರ್ನಾಟಕ 371(ಜೆ) ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು. (ಅನ್ವಯವಾಗುವವರಿಗೆ).
6. ವಿಕಲಚೇತನ ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು. (ಅನ್ವಯವಾಗುವವರಿಗೆ).
7. ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರವನ್ನು ಹೊಂದಿರತಕ್ಕದ್ದು.
8. ಗ್ರಾಮೀಣ ಅಥವಾ ಕನ್ನಡ ಮಾಧ್ಯಮ ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯಲು ಕಡ್ಡಾಯವಾಗಿ ದೃಢೀಕೃತ ದಾಖಲೆಗಳನ್ನು ಹೊಂದಿರತಕ್ಕದ್ದು.

ಅಭ್ಯರ್ಥಿಗಳು ಮೇಲ್ಕಂಡ ಮೂಲ ಪ್ರಮಾಣ ಪತ್ರಗಳನ್ನು ಪ್ರವೇಶ ಸಂದರ್ಭದಲ್ಲಿ ಹಾಜರುಪಡಿಸಬೇಕು.

ಅರ್ಜಿ ಸ್ವೀಕರಿಸಲು ಸೂಚಿಸಿರುವ ಕೊನೆಯ ದಿನಾಂಕದ ಬಳಿಕ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಪ್ರವೇಶವನ್ನು ಅರ್ಹತೆ ಹಾಗೂ ಸರ್ಕಾರ ಸೂಚಿಸಿರುವ ಮೀಸಲಾತಿ ನಿಯಮಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ಇತರೆ ಆರ್ಥಿಕ ದುರ್ಬಲ ವರ್ಗದವರಿಗೆ ಶೇ. 5% ಮೀಸಲಾತಿ ಇರುತ್ತದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶ ಮತ್ತು ವಿಕಲಚೇತನ ಕೋಟಾದಡಿಯಲ್ಲಿ ಸರ್ಕಾರದ ನಿಯಮಾನುಸಾರ ಮೀಸಲಾತಿ ನೀಡಲಾಗುವುದು. ಮೀಸಲಾತಿ ಬಯಸುವ ವಿದ್ಯಾರ್ಥಿಗಳು ಕಂದಾಯ /ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.

ಹೊರ ರಾಜ್ಯಗಳಿಂದ ಬರುವ ಅಭ್ಯರ್ಥಿಗಳು ವಲಸೆ (ಮೈಗ್ರೇಶನ್) ಪ್ರಮಾಣಪತ್ರವನ್ನು ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಪ್ರವೇಶ ಅರ್ಹತಾ ಪತ್ರವನ್ನು ಹಾಜರುಪಡಿಸಬೇಕು. ಪ್ರವೇಶದ ಸಂದರ್ಭದಲ್ಲಿ ಅಭ್ಯರ್ಥಿ ತನ್ನ ತಂದೆ ತಾಯಿ/ಪೋಷಕರೊಂದಿಗೆ ಬರುವುದು ಕಡ್ಡಾಯವಾಗಿರುತ್ತದೆ. ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಯು ತುಮಕೂರು ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆಯುವವರೆಗೂ ತಾತ್ಕಾಲಿಕವಾಗಿರುತ್ತವೆ.

## ವಿದ್ಯಾರ್ಥಿಗಳಿಗೆ ಸೂಚನೆಗಳು:

1. ತರಗತಿಯಲ್ಲಿ ಹಾಜರಾತಿ ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಗಳು ಶೇ.75 ಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನರ್ಹರಾಗುತ್ತಾರೆ.
2. ಅಧ್ಯಾಪಕರ ಅಥವಾ ಪ್ರಾಂಶುಪಾಲರ ಪೂರ್ವಾನುಮತಿ ಇಲ್ಲದೆ ತರಗತಿ ಕೊಠಡಿಯಿಂದ ಅನಾವಶ್ಯಕವಾಗಿ ಹೊರಹೋಗುವಂತಿಲ್ಲ.
3. ವಿದ್ಯಾರ್ಥಿಗಳು ಕಾಲೇಜಿನ ವೇಳೆಯಲ್ಲಿ ಶೈಕ್ಷಣಿಕ ಹಾಗೂ ಆಡಳಿತ ವ್ಯವಹಾರಗಳ ಸಂದರ್ಭದಲ್ಲಿ ಹಾಗೂ ಪರೀಕ್ಷಾ ಕೊಠಡಿಯಲ್ಲಿ, ಪ್ರವೇಶಾತಿಯ ಸಂದರ್ಭದಲ್ಲಿ ನೀಡಲಾಗುವ ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಾಗಿದೆ.
4. ವಿದ್ಯಾರ್ಥಿಗಳು ತರಗತಿಗಳು ನಡೆಯುವ ಸಂದರ್ಭದಲ್ಲಿ ಕಾಲೇಜಿನ ಆವರಣದಲ್ಲಿ ಅನಗತ್ಯ ಓಡಾಟ ಮತ್ತು ಮೊಬೈಲ್ ಬಳಸುವುದನ್ನು ನಿರ್ಬಂಧಿಸಲಾಗಿದೆ.
5. ಕಾಲೇಜಿನ ಆವರಣದಲ್ಲಿ ಗುಟ್ಕಾ, ಧೂಮಪಾನ ಮುಂತಾದ ಯಾವುದೇ ದುಶ್ಚಟಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ, ಅಂತಹ ಪ್ರಸಂಗಗಳು ಘಟಿಸಿದ ಪಕ್ಷದಲ್ಲಿ ತಪ್ಪಿತಸ್ಥ ವಿದ್ಯಾರ್ಥಿಗಳ ಪ್ರವೇಶವನ್ನು ರದ್ದುಗೊಳಸಲಾಗುವುದು
6. ಕಾಲೇಜಿನ ಆವರಣ, ಗ್ರಂಥಾಲಯ, ತರಗತಿಗಳು, ಶೌಚಾಲಯಗಳಲ್ಲಿ ಅಶ್ಲೀಲವಾದಂತಹ ಬರವಣಿಗೆಗಳನ್ನು ನಿಷೇಧಿಸಲಾಗಿದೆ. ಇಂತಹ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.
7. ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಶುಚಿತ್ವವನ್ನು ಕಾಪಾಡುವುದಕ್ಕೆ ಬದ್ಧರಾಗಿರಬೇಕು.
8. ಪ್ರಾಂಶುಪಾಲರ ಪೂರ್ವಾನುಮತಿಯಿಲ್ಲದೆ ಯಾವುದೇ ಸಭೆಗಳನ್ನು ಅಥವಾ ಪ್ರವಾಸಗಳನ್ನು ಆಯೋಜಿಸುವಂತಿಲ್ಲ. ಅಂತಹ ಸಂದರ್ಭದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು.
9. ಹೊರಗಿನಿಂದ ವಿದ್ಯಾರ್ಥಿಯನ್ನು ಕಾಣಲು ಯಾರೇ ಬಂದರೂ ಪ್ರಾಂಶುಪಾಲರ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.
10. ಕಾಲೇಜು ಕಾಲಕಾಲಕ್ಕೆ ಹೊರಡಿಸುವ ಪರೀಕ್ಷಾ ವೇಳಾಪಟ್ಟಿ, ಶುಲ್ಕಗಳು ಹಾಗೂ ಉಳಿದ ಪ್ರಕಟಣೆಗಳಿಗಾಗಿ ಕಾಲೇಜಿನ ಪ್ರಕಟಣಾ ಫಲಕದಲ್ಲಿ ತಿಳಿಸುವ/ಸೂಚಿಸುವ ಮಾಹಿತಿಗಳನ್ನು

ಪ್ರತಿನಿತ್ಯ ಗಮನಿಸಬೇಕು.ತಪ್ಪಿದಲ್ಲಿ ಆಗುವ ತೊಂದರೆಗಳಿಗೆ ವಿದ್ಯಾರ್ಥಿಗಳೇ ಹೊಣೆಗಾರರಾಗುತ್ತಾರೆ.

11. ನಿಯೋಜಿತ ಕಾರ್ಯಗಳು ಹಾಗೂ ಕಿರು ಪರೀಕ್ಷೆಗಳು ಕಡ್ಡಾಯವಾಗಿರುತ್ತವೆ.
12. ಕಾಲೇಜು ಸಂಘಟಿಸುವ ಪಠ್ಯ ಪೂರಕ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕಾಗುತ್ತದೆ
13. ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಪಠ್ಯದ ಜೊತೆಗೆ ಮಾತ್ರ ಕೈಗೊಳ್ಳಲು ಅವಕಾಶವಿರುತ್ತದೆ.
14. ಕಾಲೇಜಿನಲ್ಲಿ ಎಲ್ಲರೊಂದಿಗೆ ಸಭ್ಯ ಹಾಗೂ ಸಹನೀಯ ನಡವಳಿಕೆ ಹೊಂದಿರಬೇಕು
15. ಭಾಷಾ ವಿಷಯದ ಪಠ್ಯಪುಸ್ತಕಗಳನ್ನು ತರಗತಿಗಳಿಗೆ ತರುವುದು ಕಡ್ಡಾಯವಾಗಿರುತ್ತದೆ.
16. ವಿದ್ಯಾರ್ಥಿಗಳು ಯಾವುದೇ ರೀತಿಯ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದು ಕಂಡುಬಂದಲ್ಲಿ ಅಂಥವರ ಪ್ರವೇಶವನ್ನು ರದ್ದುಗೊಳಿಸಲಾಗುವುದು.
17. ಪ್ರಾಂಶುಪಾಲರ ಸಹಿಯ ಅಗತ್ಯವಿರುವ ಯಾವುದೇ ಪ್ರಮಾಣಪತ್ರ, ದಾಖಲೆಗಳನ್ನು ಪರಿಶೀಲನೆಗಾಗಿ ಕಾಲೇಜಿನ ಕಛೇರಿಯಲ್ಲಿ ಸಲ್ಲಿಸುವುದು. ನೇರವಾಗಿ ಪ್ರಾಂಶುಪಾಲರನ್ನು ಸಹಿಗಾಗಿ ಸಂಪರ್ಕಿಸತಕ್ಕದ್ದಲ್ಲ
18. ವಿದ್ಯಾರ್ಥಿಗಳು ಕಾಲೇಜಿನ ಆಸ್ತಿಯನ್ನು ಸುರಕ್ಷಿತವಾಗಿಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.
19. ಕಾಲೇಜಿನಲ್ಲಿ ಅಶಿಸ್ತನ್ನು ಪ್ರದರ್ಶಿಸುವುದು, ಅಶ್ಲೀಲ ಭಾಷೆಯ ಬಳಕೆ, ಅಧ್ಯಾಪಕರೊಂದಿಗೆ ಹಾಗೂ ಸಹ ವಿದ್ಯಾರ್ಥಿಗಳೊಂದಿಗೆ ಅನುಚಿತವಾಗಿ ವರ್ತಿಸಿದಲ್ಲಿ ಅಂತಹ ವಿದ್ಯಾರ್ಥಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.
20. ವಿದ್ಯಾರ್ಥಿಗಳು ಎನ್..ಎಸ್.ಎಸ್., ಎನ್.ಸಿ.ಸಿ, ರೆಡ್‌ಕ್ರಾಸ್, ಸ್ಕೌಟ್ಸ್ & ಗೈಡ್ಸ್ ಈ ಯಾವುದಾದರೊಂದು ಘಟಕಗಳಲ್ಲಿ ನೋಂದಣಿ ಮಾಡಿಕೊಳ್ಳಬೇಕಿರುವುದು ಕಡ್ಡಾಯವಾಗಿರುತ್ತದೆ.

## ರಾಷ್ಟ್ರೀಯ ಶಿಕ್ಷಣ ನೀತಿಯಡಿ ವ್ಯಾಸಂಗದ ಕೋರ್ಸುಗಳು

ಕಾಲೇಜಿನಲ್ಲಿ ಬಿ.ಎ., ಬಿ.ಎಸ್.ಡಬ್ಲ್ಯು., ಬಿ.ಕಾಂ., ಬಿಬಿಎ ಹಾಗೂ ಬಿ.ವಿ.ಎ.(ಬ್ಯಾಚಲರ್ ಆಫ್ ವಿಶುವಲ್ ಆರ್ಟ್ಸ್) ಕೋರ್ಸುಗಳು ಲಭ್ಯವಿರುತ್ತವೆ.

ಲಭ್ಯವಿರುವ ಭಾಷೆಗಳು – ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ ಹಾಗೂ ಉರ್ದು

## ಕಾಲೇಜಿನಲ್ಲಿ ಲಭ್ಯವಿರುವ ಪ್ರಧಾನ (ಮೇಜರ್) ವಿಷಯಗಳು

| ಕ್ರ.ಸಂ. | ಕೋರ್ಸ್ | ಪ್ರಧಾನ ವಿಷಯಗಳು (ಯಾವುದಾದರು ಎರಡು) | ಪ್ರವೇಶ ಮಿತಿ |
|---|---|---|---|
| 1. | ಬಿ.ಎ. | ಐಚ್ಛಿಕ ಕನ್ನಡ, | 144 |
| 2. | | ಐಚ್ಛಿಕ ಇಂಗ್ಲೀಷ್, | 144 |
| 3. | | ಇತಿಹಾಸ | 288 |
| 4. | | ಅರ್ಥಶಾಸ್ತ್ರ | 240 |
| 5. | | ರಾಜ್ಯಶಾಸ್ತ್ರ | 240 |
| 6. | | ಸಮಾಜಶಾಸ್ತ್ರ | 144 |
| 7. | | ಪತ್ರಿಕೋದ್ಯಮ | 144 |
| 8. | | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 48 |
| 9. | | ಮನಃಶಾಸ್ತ್ರ | 48 |
| | | | |
| 10. | ಬಿ.ಎಸ್.ಡಬ್ಲ್ಯು. | ನಿಗದಿತ ಪಠ್ಯವಿಷಯಗಳು | 72 |
| 11. | ಬಿ.ಕಾಂ. | ನಿಗದಿತ ಪಠ್ಯವಿಷಯಗಳು | 360 |
| 12. | ಬಿ.ಬಿ.ಎ. | ನಿಗದಿತ ಪಠ್ಯವಿಷಯಗಳು | 72 |
| 13. | ಬಿ.ವಿ.ಎ. | ಫೌಂಡೇಶನ್ ಕೋರ್ಸ್(ಪಿ.ಯು.ಸಿ. ನಂತರ– ಒಂದು ವರ್ಷ) | 60 |
| | | ಪೇಂಟಿಂಗ್ (ಮೂರು ವರ್ಷ) | 30 |
| | | ಅಪ್ಲೈಡ್ ಆರ್ಟ್ (ಮೂರು ವರ್ಷ) | 30 |

ಪ್ರತಿ ಕೋರ್ಸುಗಳಲ್ಲಿ ಕನಿಷ್ಠ 15 ವಿದ್ಯಾರ್ಥಿಗಳು ಪ್ರವೇಶ ಪಡೆದರೆ ಮಾತ್ರ ಆ ಕೋರ್ಸ್‌ಗೆ ಈ ಶೈಕ್ಷಣಿಕ ವರ್ಷಕ್ಕೆ ಅವಕಾಶ ಕಲ್ಪಿಸಲಾಗುವುದು. ಇಲ್ಲವಾದಲ್ಲಿ ಆ ಕೋರ್ಸನ್ನು ಸ್ಥಗಿತಗೊಳಸಲಾಗುವುದು.

ವಿದ್ಯಾರ್ಥಿಗಳ ಶೈಕ್ಷಣಿಕ ಅರ್ಹತೆಯ (ಮೆರಿಟ್ ಮತ್ತು ರೋಸ್ಟರ್) ಆಧಾರದ ಮೇಲೆ ಮೇಲ್ಕಾಣಿಸಿದ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುವುದು.

ಬಿ.ಎ. ವಿದ್ಯಾರ್ಥಿಗಳು ತಮ್ಮ ಇಚ್ಛೆಯಂತೆ ಪ್ರಧಾನ ವಿಷಯ ಮಾಡಿಕೊಳ್ಳಲು ಅವಕಾಶವಿರುತ್ತದೆ. ಪ್ರವೇಶ ಪಡೆದ ಬಳಿಕ ಪ್ರಧಾನ ವಿಷಯಗಳ (ಮೇಜರ್ಸ್) ಬದಲಾವಣೆಗೆ ಅವಕಾಶ ಇರುವುದಿಲ್ಲ. ಮುಕ್ತ ಆಯ್ಕೆಯ ವಿಷಯಗಳನ್ನು ಪ್ರಧಾನ ವಿಷಯಗಳೊಂದಿಗೆ ಪ್ರತೀ ಸೆಮೆಸ್ಟರ್‌ನಲ್ಲೂ ಅವರ ಆಯ್ಕೆಯನುಸಾರವಾಗಿ ಆಯ್ದುಕೊಳ್ಳಬಹುದಾಗಿದೆ.

## ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆಗಳು:

1. ಎಲ್ಲಾ ಕೋರ್ಸ್ ಗಳು ನಾಲ್ಕು ವರ್ಷದ ಅವಧಿಯಾಗಿರುತ್ತವೆ.
2. ಬಿ.ಎ. ಆನರ್ಸ್ ಪದವಿಗೆ ಸೇರಬಯಸುವ ವಿದ್ಯಾರ್ಥಿಗಳು ಲಭ್ಯವಿರುವ ಯಾವುದಾದರೂ ಎರಡು ವಿಷಯಗಳನ್ನು ಪ್ರಧಾನವಾಗಿ ಆರಿಸಿಕೊಳ್ಳಬೇಕು.
3. ಬಿ.ಕಾಂ. ಬಿ.ಬಿ.ಎ, ಬಿಎಸ್. ಡಬ್ಲ್ಯೂ ಹಾಗೂ ಬಿ.ವಿ.ಎ. ಪದವಿಗಳ ಅಧ್ಯಯನಕ್ಕೂ ಅವಕಾಶವಿರುತ್ತದೆ.
4. ಎಲ್ಲಾ ವಿದ್ಯಾರ್ಥಿಗಳು ಎರಡು ಬಾಷೆಗಳನ್ನು ತಮ್ಮ ಪದವಿಯ ಪಠ್ಯದೊಂದಿಗೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬೇಕಾಗಿರುತ್ತದೆ.
5. ನಾಲ್ಕು ವರ್ಷಗಳ ಅಧ್ಯಯನದ ಕೋರ್ಸ್ ಆಗಲಿದ್ದು, ಮೊದಲ ವರ್ಷವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿ ಸರ್ಟಿಫಿಕೇಟ್, ಎರಡನೆಯ ವರ್ಷಕ್ಕೆ ಡಿಪ್ಲೋಮೊ, ಮೂರನೆಯ ವರ್ಷಾಂತ್ಯಕ್ಕೆ ಪದವಿ ಹಾಗೂ ನಾಲ್ಕು ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಆನರ್ಸ್ ಪದವಿ ಪ್ರಮಾಣಪತ್ರವನ್ನು ಪಡೆದುಕೊಳ್ಳುವ ಅವಕಾಶವಿರುತ್ತದೆ.
6. ಮೂರು ವರ್ಷದ ಪದವಿಯನ್ನು ಪಡೆದವರಿಗೆ ಸ್ನಾತಕೋತ್ತರ ಪದವಿ ಎರಡು ವರ್ಷಗಳ ಅವಧಿಯದ್ದಾಗಿರುತ್ತದೆ.
7. ನಾಲ್ಕು ವರ್ಷ ಪೂರೈಸಿದ ಆನರ್ಸ್ ಪದವಿ ವಿದ್ಯಾರ್ಥಿಗಳು ನೇರವಾಗಿ ಎರಡನೇ ವರ್ಷದ ಸ್ನಾತಕೋತ್ತರ ಪದವಿಗೆ ಅರ್ಹರಾಗಿರುತ್ತಾರೆ.
8. ಸಂಶೋಧನೆಯೊಂದಿಗೆ ಆನರ್ಸ್ ಪದವಿಯನ್ನು ಪಡೆಯುವವರು ನೇರವಾಗಿ ಪಿ.ಎಚ್.ಡಿ ವ್ಯಾಸಂಗಕ್ಕೆ ಸೇರುವ ಅವಕಾಶವಿರುತ್ತದೆ.

## ಪಾಳಿ ಪದ್ಧತಿ:

ಕಾಲೇಜು ಎರಡು ಪಾಳಿಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಬೆಳಗಿನ ಅವಧಿ 8.00 ರಿಂದ 12.30 ರವರೆಗೆ ಬಿ.ಕಾಂ/ಬಿ.ಬಿ.ಎ/ಬಿ.ಎಸ್.ಡಬ್ಲ್ಯು ತರಗತಿಗಳು ಹಾಗೂ ಮಧ್ಯಾಹ್ನದ ಅವಧಿ 12.30 ರಿಂದ ಸಂಜೆ 5.10 ರವರೆಗೆ ಬಿ.ಎ. ತರಗತಿಗಳು ನಡೆಯುತ್ತವೆ. ದೃಶ್ಯ/ಲಲಿತಕಲಾ ವಿಭಾಗದ ತರಗತಿಗಳು ಬೆಳಗ್ಗೆ 10.00ರಿಂದ ಸಂಜೆ 5.00 ರವರೆಗೆ ನಡೆಯುತ್ತವೆ.

## ದ್ವಿತೀಯ ಹಾಗೂ ತೃತೀಯ ಪದವಿ ಪ್ರವೇಶ:

2021-22 ಹಾಗೂ 2020-21 ನೇ ಸಾಲಿನಲ್ಲಿ ಇದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಪದವಿ ವಿದ್ಯಾರ್ಥಿಗಳು ಕಾಲೇಜಿನ ಕಛೇರಿಯಿಂದ ದಾಖಲಾತಿ ನವೀಕರಣ ಅರ್ಜಿ ನಮೂನೆಗಳನ್ನು ಪಡೆದು ವಿವರಗಳನ್ನು ಭರ್ತಿ ಮಾಡಿ, ನಿಗದಿತ ಶುಲ್ಕ ಪಾವತಿಸಿ ಮರುಪ್ರವೇಶ ಪಡೆಯಬೇಕು. ಶುಲ್ಕ ರಿಯಾಯಿತಿಯನ್ನು ಬಯಸುವ ವಿದ್ಯಾರ್ಥಿಗಳು ತಮ್ಮ ಪೋಷಕರ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಈ ಹಿಂದಿನ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಪಡೆದ ಪ್ರವೇಶ ಪತ್ರದ ನಕಲನ್ನು ನೀಡಬೇಕು.

## ಶುಲ್ಕದ ವಿವರ:

UUCMS ಮೂಲಕ ವಿದ್ಯಾರ್ಥಿಗಳ ದಾಖಲಾತಿ ಪರಿಶೀಲನೆಯಾದ ನಂತರ ವಿದ್ಯಾರ್ಥಿಯ UUCMS ಲಾಗಿನ್‌ನಲ್ಲಿ ಪ್ರವೇಶವನ್ನು ಶುಲ್ಕವನ್ನು ಪಾವತಿಸತಕ್ಕದ್ದು. ವಿದ್ಯಾರ್ಥಿಯ UUCMS ಲಾಗಿನ್‌ನಲ್ಲಿ ಪ್ರವೇಶ ಶುಲ್ಕದ ಮಾಹಿತಿಯನ್ನು ಪಡೆಯಬಹುದಾಗಿದೆ. ಸರ್ಕಾರದ ನೂತನ ನಿಯಮಾವಳಿಗಳ ಪ್ರಕಾರ ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳ ಆಧಾರ್ ಲಿಂಕ್ ಆಗಿರುವ ಖಾತೆಗೆ ನೇರವಾಗಿ ಜಮೆಯಾಗುವ ಹಿನ್ನೆಲೆಯಲ್ಲಿ, UUCMS ಮೂಲಕ ಸರ್ಕಾರ ಮತ್ತು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕಗಳನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸತಕ್ಕದ್ದು. ವಿದ್ಯಾರ್ಥಿ ವೇತನಕ್ಕೆ ಸರ್ಕಾರದ ಅಂತರ್ಜಾಲದ ಮೂಲಕ ಅರ್ಜಿಗಳನ್ನು ಸಲ್ಲಿಸುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿರುತ್ತದೆ. ವಿದ್ಯಾರ್ಥಿ ವೇತನವು ಕಾಲೇಜು ಅಥವಾ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗುವುದಿಲ್ಲ ಎಂಬ ಮಾಹಿತಿಯನ್ನು ಎಲ್ಲಾ ವಿದ್ಯಾರ್ಥಿಗಳು ಮನದಟ್ಟುಮಾಡಿಕೊಳ್ಳತಕ್ಕದ್ದು.

## ಶಿಸ್ತುಪಾಲನೆಗೆ ಆದ್ಯತೆ:

ಶಿಸ್ತು ವಿದ್ಯಾರ್ಥಿ ಜೀವನದ ಅವಿಭಾಜ್ಯ ಅಂಗ. ಶಿಸ್ತುಬದ್ಧ ಅಧ್ಯಯನ ಭದ್ರ ಭವಿಷ್ಯದ ಬುನಾದಿಯೆಂದು ಮನಗಂಡಿರುವ ವಿಶ್ವವಿದ್ಯಾನಿಲಯ ಕಲಾ ಕಾಲೇಜು ಶಿಸ್ತುಪಾಲನೆಗೆ ಮೊದಲ ಆದ್ಯತೆ ನೀಡುತ್ತದೆ. ಕಾಲೇಜಿನಲ್ಲಿ ಅಶಿಸ್ತಿನಿಂದ ವರ್ತಿಸಿ ಅಶಾಂತಿಗೆ ಕಾರಣರಾಗುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳಲ್ಲಿ ಶಿಸ್ತಿನ ಮನೋಭಾವವನ್ನು ಬೆಳೆಸಲು, ಅಶಿಸ್ತನ್ನು ನಿಯಂತ್ರಿಸಲು ವಿಭಾಗಗಳ ಮುಖ್ಯಸ್ಥರು ಹಾಗೂ ಹಿರಿಯ ಅಧ್ಯಾಪಕರನ್ನು ಒಳಗೊಂಡ ಶಿಸ್ತುಪಾಲನಾ ಸಮಿತಿಯಿದೆ. ಕಾಲೇಜಿನಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದ್ದು ವಿದ್ಯಾರ್ಥಿಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

## ರ್‍ಯಾಗಿಂಗ್ ಮುಕ್ತ ಕ್ಯಾಂಪಸ್:

ನಮ್ಮ ಕಾಲೇಜು ರ್‍ಯಾಗಿಂಗ್‌ನಿಂದ ಮುಕ್ತವಾಗಿದೆ ಎಂಬುದು ಹೆಮ್ಮೆಯ ವಿಷಯ. ಆದಾಗ್ಯೂ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ಕಾಲೇಜಿನಲ್ಲಿ ಯುಜಿಸಿ ನಿರ್ದೇಶನದಂತೆ ಹಿರಿಯ ಅಧ್ಯಾಪಕರ ನೇತೃತ್ವದ ರ್‍ಯಾಗಿಂಗ್ ನಿರ್ಬಂಧಕ ಘಟಕವನ್ನು ಸ್ಥಾಪಿಸಲಾಗಿದ್ದು, ಕಾಲೇಜು ಆವರಣದಲ್ಲಿ ಎಲ್ಲಾ ಕಡೆಯೂ ರ್‍ಯಾಗಿಂಗ್ ಚಟುವಟಿಕೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ರೀತ್ಯ, ರ್‍ಯಾಗಿಂಗ್ ಒಂದು ಕ್ರಿಮಿನಲ್ ಅಪರಾಧವಾಗಿರುತ್ತದೆ. ಕರ್ನಾಟಕ ಶಿಕ್ಷಣ ಕಾಯಿದೆ 1983 ರ 116 ನೇ ಪ್ರಕರಣದ ಪ್ರಕಾರವೂ ರ್‍ಯಾಗಿಂಗ್ ಅಪರಾಧವಾಗಿರುತ್ತದೆ. ಈ ಸಂಸ್ಥೆಯು ಎಲ್ಲಾ ಘಟಕಗಳಲ್ಲಿ (ಶೈಕ್ಷಣಿಕ, ವಸತಿಗೃಹ, ಕ್ರೀಡಾ ಚಟುವಟಿಕೆ, ಉಪಾಹಾರ ಗೃಹ, ಮಾಹಿತಿ ಕೇಂದ್ರ ಮೊದಲಾದ ಕಡೆ), ರ್‍ಯಾಗಿಂಗ್ ನಿಷೇಧಿಸಿದೆ. ಸಂಸ್ಥೆಯ ಆವರಣದಲ್ಲಿ ಹಾಗೂ ವಿದ್ಯಾರ್ಥಿಗಳು ಬಳಸುವ ಸಾರ್ವಜನಿಕ ಹಾಗೂ ಖಾಸಗಿ ಸಾರಿಗೆ ವ್ಯವಸ್ಥೆಯಲ್ಲಿಯೂ ರ್‍ಯಾಗಿಂಗ್ ನಿಷೇಧಿಸಲ್ಪಟ್ಟಿದೆ. ರ್‍ಯಾಗಿಂಗ್‌ನಲ್ಲಿ ಭಾಗಿಯಾಗಿರುವ ಹಾಗೂ ಅದನ್ನು ಪ್ರೋತ್ಸಾಹಿಸುವ ವ್ಯಕ್ತಿಗಳ ವಿರುದ್ಧ ಬಾಧೆಗೊಳಗಾದ ವ್ಯಕ್ತಿಗಳು ದಾಖಲಿಸುವ ಲಿಖಿತ ದೂರಿನ ಅನ್ವಯವಾಗಲಿ ಅಥವಾ ಸಂಸ್ಥೆಯು ರಚಿಸಿರುವ

ರ್ಯಾಗಿಂಗ್ ವಿರೋಧಿ ಪಡೆಯು ನಡೆಸುವ ತಪಾಸಣೆಯ ಅನ್ವಯವಾಗಲಿ ಶಿಸ್ತುಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಈ ಸಂಸ್ಥೆಯು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರ್ಯಾಗಿಂಗ್ ಅನ್ನು ನಿರ್ಬಂಧಿಸುವ ಯು.ಜಿ.ಸಿ ನಿಯಮಾವಳಿ 2009ಕ್ಕೆ ಬದ್ಧವಾಗಿರುತ್ತದೆ.

## ತರಗತಿಗಳಲ್ಲಿ ಹಾಜರಾತಿ:

ವಿಶ್ವವಿದ್ಯಾನಿಲಯ ನಿಗದಿಪಡಿಸಿರುವಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಎಲ್ಲ ವಿಷಯಗಳ ತರಗತಿಗಳಲ್ಲೂ 75% ಹಾಜರಾತಿ ಹೊಂದಿರುವುದು ಕಡ್ಡಾಯವಾಗಿರುತ್ತದೆ. ಈ ಹಾಜರಾತಿ ಪ್ರಮಾಣವನ್ನು ಹೊಂದಿರದ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ತರಗತಿಗೆ ಹಾಜರಾಗಿ ಶ್ರದ್ಧೆಯಿಂದ ಅಧ್ಯಯನದಲ್ಲಿ ತೊಡಗಿಕೊಳ್ಳಲು ಸೂಚಿಸಿದೆ. ವಿದ್ಯಾರ್ಥಿಗಳ ಹಾಜರಾತಿಯ ಮೇಲೆ ನಿಗಾ ಇಡಲು ಹಾಜರಾತಿ ಸಮಿತಿಯು ಕಾರ್ಯನಿರ್ವಹಿಸುತ್ತದೆ.

## ವಿದ್ಯಾರ್ಥಿ ವೇತನಗಳು:

ಕಾಲೇಜಿನಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಈ ಕೆಳಕಂಡ ವಿವಿಧ ವಿದ್ಯಾರ್ಥಿ ವೇತನಗಳನ್ನು ಪಡೆಯುವ ಸೌಲಭ್ಯ ಲಭ್ಯವಿರುತ್ತದೆ. ವಿದ್ಯಾರ್ಥಿ ವೇತನಕ್ಕೆ ಸರ್ಕಾರ/ಸಂಬಂಧಿಸಿದ ಸಂಸ್ಥೆಗಳ ನಿಯಮದಂತೆ ಅಂತರ್ಜಾಲದ ಮೂಲಕ ಅರ್ಜಿಗಳನ್ನು ಸಲ್ಲಿಸುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿರುತ್ತದೆ. ವಿದ್ಯಾರ್ಥಿ ವೇತನವು ಕಾಲೇಜು ಅಥವಾ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗುವುದಿಲ್ಲ ಎಂಬ ಮಾಹಿತಿಯನ್ನು ಎಲ್ಲಾ ವಿದ್ಯಾರ್ಥಿಗಳು ಮನದಟ್ಟುಮಾಡಿಕೊಳ್ಳತಕ್ಕದ್ದು.

1. ವಿದ್ಯಾರ್ಥಿವೇತನಕ್ಕಾಗಿ ಈ ವರ್ಷ ಎಲ್ಲಾ ವಿದ್ಯಾರ್ಥಿಗಳು ಎಸ್.ಎಸ್.ಪಿ ಅಡಿಯಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯ
2. ಭಾಷಾ ವಿಷಯಗಳಿಗೆ ನೀಡುವ ಭಾರತ ಸರ್ಕಾರದ ಪ್ರತಿಭಾ ವಿದ್ಯಾರ್ಥಿ ವೇತನ.
3. ಭಾರತ ಸರ್ಕಾರದ ಪರಿಶಿಷ್ಟ ಜಾತಿ ವಿದ್ಯಾರ್ಥಿ ವೇತನ.
4. ಕರ್ನಾಟಕ ಸರ್ಕಾರದ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವೇತನ.
5. ಬೀಡಿ ಕಾರ್ಮಿಕರ ವಿದ್ಯಾರ್ಥಿ ವೇತನ.
6. ಸಂಚಿ ಹೊನ್ನಮ್ಮ ನೆನಪಿನ ವಿದ್ಯಾರ್ಥಿ ವೇತನ.
7. ಹಿಂದುಳಿದ ಮತ್ತು ಅಲ್ಪಸಂಖ್ಯಾತ ಇಲಾಖೆಯ ವಿದ್ಯಾರ್ಥಿ ವೇತನ.
8. ಮಾಜಿ ಸೈನಿಕರ ಅವಲಂಬಿತರ ವಿದ್ಯಾರ್ಥಿ ವೇತನ.
9. ವಿವಿಧ ಸಮುದಾಯ, ಟ್ರಸ್ಟ್‌ಗಳು ನೀಡುವ ವಿದ್ಯಾರ್ಥಿ ವೇತನ.
10. ಸೀತಾರಾಂ ಜಿಂದಾಲ್ ಪ್ರತಿಷ್ಠಾನದ ವಿದ್ಯಾರ್ಥಿ ವೇತನ.
11. ಎನ್‌ಸಿಸಿ ವಿದ್ಯಾರ್ಥಿಗಳಿಗೆ ಸಹರಾ ಮತ್ತು ಕೆಡೆಟ್ ವೆಲ್ ಫೇರ್ ಸೊಸೈಟಿ ವಿದ್ಯಾರ್ಥಿ ವೇತನ.
12. ತುಮಕೂರು ಮಹಾನಗರ ಪಾಲಿಕೆ ಪ್ರೋತ್ಸಾಹಧನ (ಪ.ಜಾ./ಪ.ಪಂ. ವಿದ್ಯಾರ್ಥಿಗಳಿಗೆ)
13. ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ.

14. ಎಂ.ಎಚ್.ಆರ್.ಡಿ. ವಿದ್ಯಾರ್ಥಿ ವೇತನ.
15. ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನ.
16. ಮುಸ್ಲಿಂ ವಿದ್ಯಾರ್ಥಿಗಳಿಗೆ ವಕ್ಫ್ ಹಾಗೂ ದರ್ಗಾ ವಿದ್ಯಾರ್ಥಿ ವೇತನ.
17. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ಕೆಎಂಡಿಸಿ)ದ ಸಾಲ ಸೌಲಭ್ಯ.
18. ಕರ್ನಾಟಕ ಸರ್ಕಾರದ ವಿದ್ಯಾಸಿರಿ ವಿದ್ಯಾರ್ಥಿ ವೇತನ.
19. ಇತರೆ ವಿದ್ಯಾರ್ಥಿ ವೇತನಗಳು.

ಹೆಚ್ಚಿನ ಮಾಹಿತಿಯನ್ನು ಕಾಲೇಜಿನ ಕಛೇರಿಯಲ್ಲಿ ಪಡೆಯಬಹುದು. ಕಾಲೇಜಿನ ಸೂಚನಾ ಫಲಕದಲ್ಲಿ ಆಗಿಂದಾಗ್ಗೆ ಪ್ರಕಟಿಸಲಾಗುವ ಮಾಹಿತಿಯನ್ನು ವಿದ್ಯಾರ್ಥಿಗಳು ಗಮನಿಸಿ ಅವಶ್ಯವಿದ್ದಲ್ಲಿ ಹೆಚ್ಚಿನ ಮಾಹಿತಿ ಪಡೆದುಕೊಂಡು ಸೂಕ್ತ ಸಮಯದಲ್ಲಿ ಅರ್ಜಿ ಸಲ್ಲಿಸಿ ಈ ವಿದ್ಯಾರ್ಥಿವೇತನಗಳ ಪ್ರಯೋಜನ ಪಡೆದುಕೊಳ್ಳಬಹುದು.

## ಕಾಲೇಜಿನ ಮೂಲಭೂತ ಸೌಕರ್ಯಗಳು:

- ಸುಸಜ್ಜಿತ ತರಗತಿ ಕೊಠಡಿಗಳು
- ಬೋಧನಾ ಕೊಠಡಿಗಳಲ್ಲಿ ಸ್ಮಾರ್ಟ್ ಬೋರ್ಡ್ ವ್ಯವಸ್ಥೆ
- ಬೋಧನಾ ಉಪಕರಣಗಳ ವ್ಯವಸ್ಥೆ
- ಸುಸಜ್ಜಿತ ಗ್ರಂಥಾಲಯ
- ವಿಶಾಲ ಕ್ರೀಡಾಂಗಣದ ವ್ಯವಸ್ಥೆ
- ಆಸ್ಪತ್ರೆ, ಅಂಚೆಕಛೇರಿ,
- ಪೋಲೀಸ್ ಹೊರಠಾಣೆ (ಸದ್ಯದಲ್ಲಿಯೇ ಪ್ರಾರಂಭವಾಗಲಿದೆ)
- ವೈಫೈ ಸೌಲಭ್ಯ
- ಉತ್ತಮ ಗುಣಮಟ್ಟದ ಹಸಿರು ಕಾಲೇಜು ಕ್ಯಾಂಪಸ್
- ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ
- ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯದ ವ್ಯವಸ್ಥೆ

## ಕಂಪ್ಯೂಟರ್ ಲ್ಯಾಬ್:

ಜಾಗತಿಕವಾದ ಸವಾಲುಗಳನ್ನು ಎದುರಿಸಲು, ವಿದ್ಯಾರ್ಥಿಗಳನ್ನು ಸನ್ನದ್ಧಗೊಳಿಸುವಲ್ಲಿ ಕಂಪ್ಯೂಟರ್ ಶಿಕ್ಷಣ ಅತ್ಯಂತ ಪ್ರಮುಖವಾದಂತಹ ಪಾತ್ರವನ್ನು ನಿರ್ವಹಿಸುತ್ತಿದ್ದು, ಅತ್ಯುತ್ತಮ ಗುಣಮಟ್ಟದ ಕಂಪ್ಯೂಟರ್ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುವ ಉದ್ದೇಶದಿಂದ ಕಾಲೇಜಿನಲ್ಲಿ ಅತ್ಯಂತ ಸುಸಜ್ಜಿತವಾದಂತಹ ಕಂಪ್ಯೂಟರ್ ಪ್ರಯೋಗಾಲಯವನ್ನು ರೂಪಿಸಲಾಗಿದ್ದು ಕಂಪ್ಯೂಟರ್ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ವಿದ್ಯಾರ್ಥಿಗಳ ಕ್ಷಮತೆಯನ್ನು ವೃದ್ಧಿಸುವ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯನ್ನು ಸಮರ್ಥವಾಗಿ ಬಳಸಲು ಸ್ಪೋಕನ್ ಇಂಗ್ಲಿಷ್ ಕೋರ್ಸ್ ಪ್ರಾರಂಭಿಸಲಾಗುವುದು.

## ಕಾಲೇಜು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ:

ಅಪೂರ್ವ ಪುಸ್ತಕ ಹಾಗೂ ನಿಯತಕಾಲಿಕಗಳ ಸಂಗ್ರಹವಿರುವ ನಮ್ಮ ಕಾಲೇಜಿನ ಗ್ರಂಥಾಲಯವು ಒಂದು ವಿಶಿಷ್ಟ ಜ್ಞಾನನಿಧಿಯಾಗಿದೆ. ಪರಾಮರ್ಶನ ಗ್ರಂಥಗಳು, ಪಠ್ಯಪುಸ್ತಕಗಳು ಸೇರಿದಂತೆ ಗ್ರಂಥಾಲಯದಲ್ಲಿ ಒಟ್ಟು ೮೦,೦೦೦ಕ್ಕಿಂತಲೂ ಹೆಚ್ಚು ಅಮೂಲ್ಯ ಪುಸ್ತಕಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲಕರ ಕೃತಿಗಳು, ಸಂಶೋಧನ ನಿಯತಕಾಲಿಕಗಳು, ಕಂಪ್ಯೂಟರ್ ಕೇಂದ್ರ, ಇಂಟರ್‌ನೆಟ್ ಸೌಲಭ್ಯ ನಮ್ಮ ಗ್ರಂಥಾಲಯದ ವಿಶೇಷತೆಗಳು.

ಗ್ರಂಥಾಲಯವು ರಜಾ ದಿನಗಳನ್ನು ಹೊರತುಪಡಿಸಿ ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10.00 ರಿಂದ ಸಂಜೆ 5.10 ರವರೆಗೆ, ಶನಿವಾರಗಳಂದು ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ತೆರೆದಿರುತ್ತದೆ ಹಾಗೂ ವಿದ್ಯಾರ್ಥಿಗಳು ಗ್ರಂಥಾಲಯದ ನಿಯಮಗಳ ಪ್ರಕಾರ ಪುಸ್ತಕಗಳನ್ನು ಎರವಲು ಪಡೆದು ನಿಗದಿತ ಅವಧಿಯಲ್ಲಿ ಹಿಂದಿರುಗಿಸಬೇಕು. ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಶೇಷ ಗ್ರಂಥನಿಧಿಯಿಂದ ಪುಸ್ತಕಗಳನ್ನು ಒದಗಿಸಲಾಗುವುದು. ವಿಭಾಗ ಮುಖ್ಯಸ್ಥರುಗಳ ಸಲಹೆಯ ಮೇರೆಗೆ ಪ್ರತಿ ವರ್ಷ ಹೊಸ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಸೇರಿಸಲಾಗುತ್ತಿದೆ. ಪರಾಮರ್ಶನ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಅಧ್ಯಯನ ಮತ್ತು ಮಾಹಿತಿ ಪಡೆಯುವ ಅವಕಾಶವಿರುತ್ತದೆ.

## ಪಠ್ಯಪೂರಕ ಚಟುವಟಿಕೆಗಳು:

ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನವೇ ಶಿಕ್ಷಣದ ಉದ್ದೇಶ ಎಂಬುದನ್ನು ಮನಗಂಡಿರುವ ಕಾಲೇಜು, ಎನ್.ಎಸ್.ಎಸ್., ಎನ್.ಸಿ.ಸಿ., ರೆಡ್‌ಕ್ರಾಸ್, ಸ್ಕೌಟ್ಸ್ & ಗೈಡ್ಸ್, ಕ್ರೀಡೆ, ಸಾಂಸ್ಕೃತಿಕ ಸಮಿತಿ ಮತ್ತಿತರ ವೇದಿಕೆಗಳ ಮೂಲಕ ವಿದ್ಯಾರ್ಥಿಗಳಿಗಾಗಿ ವರ್ಷದುದ್ದಕ್ಕೂ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. ವಿವಿಧ ವೇದಿಕೆ/ ಸಮಿತಿಗಳ ಉಸ್ತುವಾರಿಯನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ತಂಡ ನಿರ್ವಹಿಸುತ್ತದೆ.

## ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್):

ಕಾಲೇಜಿನಲ್ಲಿ ಪ್ರಸ್ತುತ ಎರಡು ರಾಷ್ಟ್ರೀಯ ಸೇವಾ ಯೋಜನಾ ಘಟಕಗಳಿದ್ದು, ಪ್ರತಿ ಘಟಕದಲ್ಲಿಯೂ 100 ಮಂದಿ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಲು ಅವಕಾಶವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಸೇವಾಮನೋಭಾವನೆಯನ್ನು ಪ್ರೇರೇಪಿಸಿ ಅವರ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ನೆರವಾಗಲು ಎನ್‌ಎಸ್‌ಎಸ್ ಶ್ರಮಿಸುತ್ತದೆ. ಪ್ರತಿ ಘಟಕದ ವತಿಯಿಂದಲೂ ವಾರಾಂತ್ಯ ಶಿಬಿರಗಳು, ಉಪನ್ಯಾಸಗಳು, ಶ್ರಮದಾನ ಹಾಗೂ ಒಂದು ವಾರದ ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗುತ್ತದೆ. ವಾರಾಂತ್ಯ ಶಿಬಿರಗಳು, ವಿಶೇಷ ಉಪನ್ಯಾಸಗಳು, ರಕ್ತದಾನ ಶಿಬಿರ, ಆರೋಗ್ಯದ ಕುರಿತು ಅರಿವು, ಸ್ವಚ್ಛತಾ ಆಂದೋಲನಗಳಿಂದ ಎನ್‌ಎಸ್‌ಎಸ್ ಕ್ರಿಯಾಶೀಲವಾಗಿದೆ.

## ಎನ್‌ಸಿಸಿ:

ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾಗುಣ ಹಾಗೂ ದೇಶಪ್ರೇಮವನ್ನು ಮೂಡಿಸುವ ಸಲುವಾಗಿ ಕಾಲೇಜಿನಲ್ಲಿ ಎನ್‌ಸಿಸಿ ಘಟಕವಿದ್ದು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿ ಒಟ್ಟು 108 ಕೆಡೆಟ್‌ಗಳಗೆ ಪ್ರವೇಶಾವಕಾಶವಿದೆ. ನಮ್ಮ ಕಾಲೇಜಿನ ಘಟಕವು 4ನೇ ಕರ್ನಾಟಕ ಬೆಟಾಲಿಯನ್‌ನ ಆರ್ಮಿ ಇನ್‌ಫ್ಯಾಂಟ್ರಿ ಶಾಖೆಗೆ ಸಂಯೋಜನೆಗೊಂಡಿದೆ. ರಾಷ್ಟ್ರೀಯ ಏಕತಾ ಶಿಬಿರ, ನಾಯಕತ್ವ ಶಿಬಿರ, ಪರ್ವತಾರೋಹಣ ಸಾಹಸ ಶಿಬಿರ ಹಾಗೂ ಆರ್ಮಿ ಅಟ್ಯಾಚ್‌ಮೆಂಟ್ ಕ್ಯಾಂಪ್‌ಗಳಲ್ಲಿ ನಮ್ಮ ಸಮರ್ಥ ಕೆಡೆಟ್‌ಗಳು ಭಾಗವಹಿಸಿ ರಾಜ್ಯ, ರಾಷ್ಟ್ರಮಟ್ಟಗಳಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡು ಬರುತ್ತಿದ್ದಾರೆ. ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎನ್‌ಸಿಸಿ ತಂಡವು ತನ್ನ ಸಮಾಜಮುಖಿ ಕರ್ತವ್ಯಗಳನ್ನು ನಿರ್ವಹಿಸುತ್ತಾ ಬಂದಿದೆ.

## ರೆಡ್‌ಕ್ರಾಸ್/ಸ್ಕೌಟ್ಸ್ & ಗೈಡ್ಸ್:

ಯುವಜನರಲ್ಲಿ ಸೇವಾ ಮನೋಭಾವ ಹಾಗೂ ಸಮುದಾಯ ಚಿಂತನೆಯನ್ನು ಬೆಳೆಸುವ ಉದ್ದೇಶದಿಂದ ಕಾಲೇಜಿನಲ್ಲಿ ರೆಡ್‌ಕ್ರಾಸ್ ಹಾಗೂ ಸ್ಕೌಟ್ಸ್ & ಗೈಡ್ಸ್ ಘಟಕಗಳಿದ್ದು, ರಕ್ತದಾನ, ರಕ್ತದ ಗುಂಪಿನ ವರ್ಗೀಕರಣ, ಸ್ವಚ್ಚತೆ, ಸೇವಾ ಮನೋಭಾವ ಬೆಳೆಸುವಂತಹ ಅನೇಕ ಚಟುವಟಿಕೆಗಳನ್ನು ಈ ಘಟಕಗಳು ನಡೆಸುತ್ತಾ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಾಳಜಿ ಪೋಷಿಸುವ ಕೆಲಸವನ್ನು ಮಾಡುತ್ತಾ ಬಂದಿವೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯೊಂದಿಗೆ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದೆ.

## ಸಾಂಸ್ಕೃತಿಕ ವೇದಿಕೆ:

ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಹೊರಗೆಡಹಲು/ಪೋಷಿಸಲು ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಲಾಗಿದೆ. ಅಧ್ಯಾಪಕರೊಬ್ಬರು ಇದರ ಸಂಚಾಲಕತ್ವ ಹೊಂದಲಿದ್ದು, ಇತರೆ ಸದಸ್ಯರ ಮಾರ್ಗದರ್ಶನದಲ್ಲಿ ವರ್ಷದುದ್ದಕ್ಕೂ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಅಲ್ಲದೆ, ವಿಶ್ವವಿದ್ಯಾನಿಲಯ ಹಾಗೂ ರಾಜ್ಯ/ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಉತ್ಸುಕ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಕಳುಹಿಸುವ ವ್ಯವಸ್ಥೆ ಇದೆ. ಪ್ರತಿ ವರ್ಷ "ಮಾನವಿಕ" ವೇದಿಕೆಯಡಿಯಲ್ಲಿ ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗುತ್ತಿದೆ.

ಕಳೆದ ಶೈಕ್ಷಣಿಕ ಸಾಲುಗಳಲ್ಲಿ ನಮ್ಮ ಕಾಲೇಜಿನ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳು ಭಾಷಣ, ಚರ್ಚೆ, ಗಾಯನ, ಪ್ರಬಂಧ, ಮಿಮಿಕ್ರಿ, ನೃತ್ಯ, ಜನಪದ ಕಲೆ, ರಸಪ್ರಶ್ನೆ, ದೃಶ್ಯಕಲೆ ಮುಂತಾದ ಸ್ಪರ್ಧೆಗಳಲ್ಲಿ ಜಿಲ್ಲೆ ಹಾಗೂ ರಾಜ್ಯ/ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ.

## ಕ್ರೀಡಾ ಚಟುವಟಿಕೆಗಳು

ಕಾಲೇಜಿನ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ನೇತೃತ್ವದಲ್ಲಿ ವರ್ಷದುದ್ದಕ್ಕೂ ಹಲವಾರು ಕ್ರೀಡಾಚಟುವಟಿಕೆಗಳು ಜರುಗುತ್ತವೆ. ವಿಶಾಲ ಕ್ರೀಡಾಂಗಣ ಕಾಲೇಜಿನ ವೈಶಿಷ್ಟ್ಯಗಳಲ್ಲೊಂದಾಗಿದ್ದು, ವಿದ್ಯಾರ್ಥಿಗಳ ಎಲ್ಲಾ ಬಗೆಯ ಒಳಾಂಗಣ ಹಾಗೂ ಹೊರಾಂಗಣ

ಕ್ರೀಡಾಸಕ್ತಿಗಳನ್ನು ಪೋಷಿಸಲಾಗುತ್ತದೆ. ಕಾಲೇಜಿನ ವಿದ್ಯಾರ್ಥಿಗಳು ಈಗಾಗಲೇ ರಾಜ್ಯ/ರಾಷ್ಟ್ರ ಮಟ್ಟಗಳಲ್ಲಿ ಸಾಕಷ್ಟು ಹೆಸರು ಗಳಿಸಿದ್ದಾರೆ. ಸದ್ಯದಲ್ಲಿಯೇ ಜಿಮ್ ಕೇಂದ್ರವನ್ನು ಆರಂಭಿಸುವ ಯೋಜನೆ ಇದೆ.

## ವಿದ್ಯಾರ್ಥಿ ಕ್ಷೇಮಪಾಲನೆ

ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತ ಶೌಚಾಲಯ ಸಮುಚ್ಚಯ ಕಾಲೇಜಿನ ವೈಶಿಷ್ಟ್ಯ. ಆದಾಗ್ಯೂ ವಿದ್ಯಾರ್ಥಿಗಳಿಗುಂಟಾಗಬಹುದಾದ ತೊಂದರೆಗಳನ್ನು ನಿವಾರಿಸಲು ಕಾಲೇಜಿನಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳನ್ನು ನೇಮಿಸಲಾಗಿದೆ. ಅಲ್ಲದೆ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕುಂದುಕೊರತೆ ನಿವಾರಣಾ ಘಟಕ ವನ್ನು ಸ್ಥಾಪಿಸಲಾಗಿದೆ. ಕಾಲೇಜಿನಲ್ಲಿ ದೂರು/ಸಲಹಾ ಪೆಟ್ಟಿಗೆಗಳನ್ನು ಇಡಲಾಗಿದ್ದು, ವಿದ್ಯಾರ್ಥಿಗಳು ತಮಗಾಗುತ್ತಿರುವ ತೊಂದರೆಗಳನ್ನು ಬರೆದು ಪೆಟ್ಟಿಗೆಗಳಿಗೆ ಹಾಕಬಹುದಾಗಿದೆ. ಪ್ರಾಂಶುಪಾಲರ ಉಪಸ್ಥಿತಿಯಲ್ಲಿ ನಿಯಮಿತವಾಗಿ ಸಲಹಾಪೆಟ್ಟಿಗೆಯನ್ನು ತೆರೆದು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

## ಆಪ್ತಸಮಾಲೋಚನೆ

ಒತ್ತಡಗಳ ನಡುವೆ ಬದುಕುತ್ತಿರುವ ಯುವಪೀಳಿಗೆಯ ಹಿತರಕ್ಷಣೆಯನ್ನು ಗಮನದಲ್ಲಿರಿಸಿಕೊಂಡು ಕಾಲೇಜಿನಲ್ಲಿ ಒಂದು ಆಪ್ತಸಮಾಲೋಚನಾ ಘಟಕವಿದ್ದು, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಅಧ್ಯಾಪಕರುಗಳನ್ನು ಆಪ್ತಸಮಾಲೋಚಕರನ್ನಾಗಿ ನೇಮಿಸಲಾಗಿದೆ. ಅಗತ್ಯವೆನಿಸಿದಾಗ ವಿದ್ಯಾರ್ಥಿಗಳು ನಿಸ್ಸಂಕೋಚವಾಗಿ ಸಂಬಂಧಪಟ್ಟ ಆಪ್ತಸಮಾಲೋಚಕರನ್ನು ಭೇಟಿಯಾಗಿ ಸಲಹೆ ಪಡೆದುಕೊಳ್ಳಬಹುದು.

## ಮಹಿಳಾ ದೌರ್ಜನ್ಯ ನಿರ್ಬಂಧ ಘಟಕ

ವಿದ್ಯಾರ್ಥಿನಿಯರ ಯೋಗಕ್ಷೇಮವನ್ನು ನೋಡಿಕೊಳ್ಳುವ ಉದ್ದೇಶದಿಂದ ಕಾಲೇಜಿನಲ್ಲಿ ಮಹಿಳಾ ದೌರ್ಜನ್ಯ ನಿರ್ಬಂಧ ಘಟಕವನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿನಿಯರು ತಮಗೇನಾದರೂ ಅನಾನುಕೂಲಗಳುಂಟಾದಲ್ಲಿ ತಕ್ಷಣ ಪ್ರಾಂಶುಪಾಲರನ್ನು ಅಥವಾ ಘಟಕದ ಸಂಚಾಲಕರನ್ನು ಖುದ್ದು ಭೇಟಿಯಾಗಿ ದೂರು ನೀಡಬಹುದಾಗಿದೆ. ಅಧ್ಯಾಪಕಿಯರು ಹಾಗೂ ವಿದ್ಯಾರ್ಥಿನಿಯರಿಗಾಗಿ ಕಾಲೇಜಿನಲ್ಲಿ ವಿಶ್ರಾಂತಿ ಕೊಠಡಿಗಳ ಸೌಲಭ್ಯವಿದೆ.

## ಉದ್ಯೋಗ ಮಾರ್ಗದರ್ಶನ ಘಟಕ

ಕಾಲೇಜಿನಲ್ಲಿರುವ ಉದ್ಯೋಗ ಮಾರ್ಗದರ್ಶನ ಘಟಕವು ವಿದ್ಯಾರ್ಥಿಗಳು ವಿವಿಧ ಉದ್ಯೋಗಗಳ ಬಗ್ಗೆ ಮಾಹಿತಿ ಮತ್ತು ತರಬೇತಿ ಪಡೆದುಕೊಳ್ಳಲು ನೆರವಾಗುತ್ತದೆ. ಆಗಿಂದಾಗ್ಗೆ ವ್ಯಕ್ತಿತ್ವ ವಿಕಸನ ಶಿಬಿರಗಳು, ಸಂದರ್ಶನ ತರಬೇತಿ, ಪ್ರವೇಶ ಪರೀಕ್ಷಾ ತರಬೇತಿ, ಸ್ಪೋಕನ್ ಇಂಗ್ಲೀಷ್ ಕೋರ್ಸ್, ಐಎಎಸ್, ಕೆಎಎಸ್ ಕೋಚಿಂಗ್ ಕ್ಲಾಸ್, ಕ್ಯಾಂಪಸ್ ನೇಮಕಾತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. ಕಾಲೇಜಿನ ಹಲವಾರು ಹಿರಿಯ ವಿದ್ಯಾರ್ಥಿಗಳು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

## ವಿದ್ಯಾರ್ಥಿ ನಿಲಯ ಸೌಕರ್ಯ

1. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಶುಲ್ಕ ಸಹಿತ ವಸತಿ ನಿಲಯದ (Paying Hostel) ಸೌಕರ್ಯ ಇರುತ್ತದೆ.
2. ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಸತಿ ನಿಲಯದ ಸೌಕರ್ಯ ಹಾಗೂ ಇತರೆ ಹಿಂದುಳಿದ ವರ್ಗಗಳ (ಓಬಿಸಿ) ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರಿತ ಹಾಸ್ಟೆಲ್ (ವಸತಿ ನಿಲಯ) ಸೌಕರ್ಯವಿರುತ್ತದೆ.

## ಯುಜಿಸಿ ವ್ಯವಹಾರಗಳ ಘಟಕ

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯುಜಿಸಿ) ದಿಂದ ಕಾಲೇಜು ಸಾಕಷ್ಟು ಯೋಜನೆಗಳನ್ನು ಪಡೆದುಕೊಳ್ಳುತ್ತಿದ್ದು ಅವುಗಳ ಸೂಕ್ತ ನಿರ್ವಹಣೆಗಾಗಿ ಯುಜಿಸಿ ವ್ಯವಹಾರಗಳ ಘಟಕವನ್ನು ಸ್ಥಾಪಿಸಲಾಗಿದೆ. ಕಾಲೇಜಿನ ಭೌತಿಕ ಹಾಗೂ ಬೌದ್ಧಿಕ ಅಭಿವೃದ್ಧಿಗೆ ಪೂರಕವಾಗಿ ಈ ಘಟಕವು ಕಾರ್ಯನಿರ್ವಹಿಸುತ್ತದೆ. ಯುಜಿಸಿಯಿಂದ ಹಲವಾರು ಯೋಜನೆಗಳು ಮಂಜೂರಾಗಿದ್ದು ಅವುಗಳ ಸದ್ಬಳಕೆಗೆ ಘಟಕವು ಶ್ರಮಿಸುತ್ತಿದೆ.

## ಆಂತರಿಕ ಗುಣಮಟ್ಟ ಭರವಸೆ ಘಟಕ (IQAC)

ಕಾಲೇಜಿನ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಗುಣಮಟ್ಟವನ್ನು ಉಳಿಸಿ ಬೆಳೆಸಲು ಆಂತರಿಕ ಗುಣಮಟ್ಟ ಭರವಸೆ ಘಟಕವನ್ನು ಸ್ಥಾಪಿಸಲಾಗಿದೆ. ಇದು ಕಾಲೇಜಿನ ಇಡೀ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಯೋಜನೆ ಹಾಗೂ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿವಿಧ ವಿಭಾಗಗಳು ಹಾಗೂ ವೇದಿಕೆಗಳು ಕಾರ್ಯಕ್ರಮಗಳನ್ನುಹಮ್ಮಿಕೊಳ್ಳುವಂತೆ ಪ್ರೇರೇಪಿಸುವುದಲ್ಲದೆ, ಅವುಗಳ ದಾಖಲೀಕರಣವನ್ನೂ ನಡೆಸುತ್ತದೆ.

# ಕಾರ್ಯಪರಿಪಾಲನಾ ಮಾರ್ಗಸೂಚಿಗಳು

## ಬೋಧಕ ಸಿಬ್ಬಂದಿಗಳಿಗೆ:

1. ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ದರ್ಶನ ಹಾಗೂ ಧ್ಯೇಯವಾಕ್ಯಗಳಿಗೆ ಸದಾ ಬದ್ಧರಾಗಿರುವುದು.
2. ಶಿಸ್ತು, ಸಮಯಪಾಲನೆ, ಸಹೃದಯತೆಗಳೊಂದಿಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರೇರಣೆ ನೀಡುವುದು.
3. ದೇಶದ ಸಂವಿಧಾನದ ಮತ್ತು ಪ್ರಜಾಸತ್ತೆಯ ಮೌಲ್ಯ ಮತ್ತು ಘನತೆಗಳನ್ನು ಗೌರವಿಸುವಂತಹ ನಡವಳಿಕೆಗಳಿಂದ ವಿದ್ಯಾರ್ಥಿಗಳಿಗೆ ಅನುಕರಣೆಯ ಮಾದರಿಯನ್ನು ನಿರ್ಮಿಸುವುದು.
4. ಕಾಲೇಜಿನ ಮತ್ತು ವಿಶ್ವವಿದ್ಯಾನಿಲಯದ ಅವಶ್ಯಕತೆಗಳಿಗನುಗುಣವಾಗಿ ತಮ್ಮ ಲಭ್ಯತೆ ಮತ್ತು ಬದ್ಧತೆಯನ್ನು ಸದಾ ಹೊಂದಿರುವುದು.
5. ಉನ್ನತ ಶಿಕ್ಷಣದ ಮೂಲ ಮಂತ್ರಗಳಾದ ಬೋಧನೆ ಮೌಲ್ಯಮಾಪನ ಮತ್ತು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.
6. ಅಧ್ಯಯನ ಸಂಶೋಧನೆ ಹಾಗೂ ಸೃಜನಶೀಲ ಚಟುವಟಿಕೆಗಳಲ್ಲಿ ನಿರಂತರತೆಯನ್ನು ಕಾಪಾಡಿಕೊಳ್ಳುವುದು.
7. ಜಾತಿ, ಮತ, ಧರ್ಮ, ಭಾಷೆ-ಪ್ರಾದೇಶಿಕತೆಗಳ ಬಹುತ್ವವನ್ನು ಗೌರವಿಸುವ ವಾತಾವರಣವನ್ನು ಸೃಷ್ಟಿಸುವುದು.
8. ಕಾಲೇಜಿನಲ್ಲಿ ವಿದ್ಯಾರ್ಥಿ ಸ್ನೇಹಿಯಾದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಾತಾವರಣ ನಿರ್ಮಾಣದೊಂದಿಗೆ ಅವರ ಆಸಕ್ತಿ ಮತ್ತು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದು.

## ಬೋಧಕೇತರ ಸಿಬ್ಬಂದಿಗಳು:

1. ಕಾಲೇಜಿನ ಬೋಧಕ ವರ್ಗ ಹಾಗೂ ವಿದ್ಯಾರ್ಥಿಗಳ ಮಧ್ಯೆ ಕೊಂಡಿಯಾಗಿ ಕಾರ್ಯನಿರ್ವಹಿಸುವುದು.
2. ವಿದ್ಯಾರ್ಥಿಗಳ ದಾಖಲಾತಿ-ಪರೀಕ್ಷಾ ಸಂಬಂಧಿಕಾರ್ಯ- ವಿದ್ಯಾರ್ಥಿವೇತನ ಇತ್ಯಾದಿಗಳ ಕುರಿತು ಸಕಾಲದಲ್ಲಿ ಸಕಾರಾತ್ಮಕವಾಗಿ ಸ್ಪಂದಿಸುವುದು.
3. ಶಿಸ್ತು ಸಮಯ ಪಾಲನೆಯೊಂದಿಗೆ ಪಾರದರ್ಶಕ ಹಾಗೂ ಸರಳವಾದ ಆಡಳಿತ ವ್ಯವಸ್ಥೆ ರೂಪಿಸುವುದು.
4. ಕಾಲೇಜಿನ ಮೂಲಭೂತ ಸೌಕರ್ಯಗಳು-ಆಡಳಿತ ಯಂತ್ರಗಳನ್ನು ಸದಾ ಸುಸ್ಥಿತಿಯಲ್ಲಿ ಇರಿಸಿಕೊಳ್ಳುವುದು.
5. ಕಾಲೇಜಿನ ಬೋಧಕ ವರ್ಗ- ಬೋಧನಾ ಕಾರ್ಯ-ಪರೀಕ್ಷಾ ಕಾರ್ಯದ ಅಗತ್ಯತೆಗಳನ್ನು ಪೂರೈಸುವುದು.
6. ಕಾಲೇಜಿನ ಶುಚಿತ್ವವನ್ನು ಕಾಪಾಡಿಕೊಳ್ಳುವುದರೊಂದಿಗೆ ಶೈಕ್ಷಣಿಕ ವಾತಾವರಣವನ್ನು ಆರೋಗ್ಯ ಪೂರ್ಣ ಹಾಗೂ ವಿದ್ಯಾರ್ಥಿಸ್ನೇಹಿಯಾಗಿಸುವುದು.

# ಬೋಧಕ ವರ್ಗ

| ಹೆಸರು | ಹುದ್ದೆ | ದೂರವಾಣಿ |
|---|---|---|
| ಪ್ರೊ. ಬಿ.ಕರಿಯಣ್ಣ | ಪ್ರಾಂಶುಪಾಲರು | 9448660632 |
| ಶ್ರೀ ಟಿ.ಎನ್. ಹರಿಪ್ರಸಾದ್ | ಉಪ-ಪ್ರಾಂಶುಪಾಲರು | 9972106625 |
| | **ಕನ್ನಡ ವಿಭಾಗ** | |
| ಡಾ. ವೆಂಕಟರೆಡ್ಡಿ ರಾಮರೆಡ್ಡಿ | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 8904464268 |
| ಪ್ರೊ. ಬಿ.ಕರಿಯಣ್ಣ | ಸಹ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು | 9448660632 |
| ಡಾ. ಎಸ್. ಶಿವಣ್ಣ | ಸಹಾಯಕ ಪ್ರಾಧ್ಯಾಪಕರು | 9740439882 |
| ಡಾ. ರೇಣುಕಾ ಎಚ್.ಆರ್. | ಸಹಾಯಕ ಪ್ರಾಧ್ಯಾಪಕರು | 9980875771 |
| ಡಾ. ನಿರಂಜನ ರಾ.ನ. | ಅತಿಥಿ ಉಪನ್ಯಾಸಕರು | 9483465018 |
| ಶ್ರೀ ಹನುಮಯ್ಯ ಎಲ್. | ಅತಿಥಿ ಉಪನ್ಯಾಸಕರು | 8971439520 |
| ಶ್ರೀ ವರದರಾಜು ಎಸ್.ಡಿ. | ಅತಿಥಿ ಉಪನ್ಯಾಸಕರು | 9844044801 |
| ಶ್ರೀ ಕೃಷ್ಣನಾಯ್ಕ ಎಲ್. | ಅತಿಥಿ ಉಪನ್ಯಾಸಕರು | 9945826815 |
| ಶ್ರೀಮತಿ. ಅಕ್ಷತ ಕೆ | ಅತಿಥಿ ಉಪನ್ಯಾಸಕರು | 7090701810 |
| ಶ್ರೀ ನಂದ ಡಿ. | ಅತಿಥಿ ಉಪನ್ಯಾಸಕರು | 9902992978 |
| ಕು. ದಾಕ್ಷಾಯಣಮ್ಮ ಎಸ್. | ಅತಿಥಿ ಉಪನ್ಯಾಸಕರು | 9731819397 |
| | **ಇಂಗ್ಲಿಷ್ ವಿಭಾಗ** | |
| ಶ್ರೀಮತಿ ದಾಕ್ಷಾಯಿಣಿ ಜಿ | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 7829059555 |
| ಡಾ. ರವಿ ಸಿ.ಎಂ. | ಸಹಾಯಕ ಪ್ರಾಧ್ಯಾಪಕರು | 8951113063 |
| ಶ್ರೀ. ಮೋಹನ್ ಪ್ರಕಾಶ್ | ಸಹಾಯಕ ಪ್ರಾಧ್ಯಾಪಕರು | 9449206066 |
| ಡಾ. ವೇಣುಗೋಪಾಲ ಬಿ.ಎನ್. | ಸಹಾಯಕ ಪ್ರಾಧ್ಯಾಪಕರು | 9535889152 |
| ಡಾ. ಸುಬ್ರಹ್ಮಣ್ಯ ಶರ್ಮ ವಿ. | ಸಹಾಯಕ ಪ್ರಾಧ್ಯಾಪಕರು | 9880828387 |
| ಶ್ರೀ ರಾಘವೇಂದ್ರ ಎ. | ಅತಿಥಿ ಉಪನ್ಯಾಸಕರು | 9900977705 |
| ಶ್ರೀಮತಿ. ಆಶಾರಾಣಿ ವಿ | ಅತಿಥಿ ಉಪನ್ಯಾಸಕರು | 9845713697 |
| ಡಾ. ಯೋಗೀಶ್ ಡಿ.ಪಿ. | ಅತಿಥಿ ಉಪನ್ಯಾಸಕರು | 9916750331 |
| | **ಹಿಂದಿ ವಿಭಾಗ** | |
| ಶ್ರೀ ಕೆ. ರಾಮಚಂದ್ರಪ್ಪ | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9916063545 |
| ಡಾ. ಶೋಭ ಟಿ.ಎನ್. | ಅತಿಥಿ ಉಪನ್ಯಾಸಕರು | 9480406994 |
| | **ಇತಿಹಾಸ ವಿಭಾಗ** | |
| ಶ್ರೀ ಟಿ.ಎನ್. ಹರಿಪ್ರಸಾದ್ | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9972106625 |
| ಡಾ. ಸಿದ್ದಣ್ಣ ಡಿ.ಟಿ. | ಅತಿಥಿ ಉಪನ್ಯಾಸಕರು | 9980595666 |
| ಶ್ರೀಮತಿ. ಲಾವಣ್ಯಶ್ರೀ ಟಿ. | ಅತಿಥಿ ಉಪನ್ಯಾಸಕರು | 9916416765 |
| ಡಾ. ಗೋಪಾಲ್ ಸಿ. | ಅತಿಥಿ ಉಪನ್ಯಾಸಕರು | 9513399569 |
| ಡಾ. ಅನಿತಾ ಟಿ | ಅತಿಥಿ ಉಪನ್ಯಾಸಕರು | 8970600676 |
| ಶ್ರೀಮತಿ. ಲತಾ ಎಸ್. | ಅತಿಥಿ ಉಪನ್ಯಾಸಕರು | 9071600703 |
| ಶ್ರೀ ರಮೇಶ್ ಹೆಚ್. | ಅತಿಥಿ ಉಪನ್ಯಾಸಕರು | 8073193094 |
| ಶ್ರೀಮತಿ. ಗೀತಾ ಜಿ.ಎಂ. | ಅತಿಥಿ ಉಪನ್ಯಾಸಕರು | 7760994144 |
| | **ಅರ್ಥಶಾಸ್ತ್ರ ವಿಭಾಗ** | |
| ಡಾ. ಉಮೇಶ್ ಎಸ್.ಇ. | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9480662242 |
| ಡಾ. ರಮೇಶ್ ಎಸ್. | ಸಹಾಯಕ ಪ್ರಾಧ್ಯಾಪಕರು | 9481266917 |
| ಡಾ. ರಮೇಶ ರೆಡ್ಡಿ ವಿ. | ಸಹಾಯಕ ಪ್ರಾಧ್ಯಾಪಕರು | 9845407609 |
| ಡಾ ಪದ್ಮಿನಿ ಎಸ್.ವಿ. | ಸಹಾಯಕ ಪ್ರಾಧ್ಯಾಪಕರು | 9845218972 |

| | | |
|---|---|---|
| **ರಾಜ್ಯಶಾಸ್ತ್ರ ವಿಭಾಗ** | | |
| ಡಾ. ಮೌನೇಶ್ವರ ಶ್ರೀನಿವಾಸರಾವ್ | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9483489915 |
| ಡಾ. ಗಿರಿಜಾ ಕೆ.ಎಸ್. | ಸಹಾಯಕ ಪ್ರಾಧ್ಯಾಪಕರು | 9916337045 |
| ಡಾ. ಶ್ರೀಪಾದ ಕುಲಕರ್ಣಿ | ಸಹಾಯಕ ಪ್ರಾಧ್ಯಾಪಕರು | 9886662415 |
| ಡಾ. ಗುಂಡೇಗೌಡ | ಸಹಾಯಕ ಪ್ರಾಧ್ಯಾಪಕರು | 9449569927 |
| ಶ್ರೀ ಯಮುನಶ್ರೀ | ಅತಿಥಿ ಉಪನ್ಯಾಸಕರು | 9164015258 |
| ಶ್ರೀ ವರದರಾಜು ಎಸ್.ಹೆಚ್. | ಅತಿಥಿ ಉಪನ್ಯಾಸಕರು | 8861557854 |
| **ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ** | | |
| ಡಾ. ನಾಗರಾಜ ಎಸ್. | ಸಹಾಯಕ ಪ್ರಾಧ್ಯಾಪಕರು ಮತ್ತು ಸಂಯೋಜಕರು | 9481852923 |
| ಡಾ. ಅಶ್ವಿನಿ | ಸಹಾಯಕ ಪ್ರಾಧ್ಯಾಪಕರು | 7892803774 |
| **ಸಮಾಜಶಾಸ್ತ್ರ ವಿಭಾಗ** | | |
| ಡಾ. ಸುನೀತಾ ವಿ. ಗಾಣಿಗೇರ | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9686608006 |
| ಡಾ. ಮಾದಪ್ಪ ಡಿ. | ಅತಿಥಿ ಉಪನ್ಯಾಸಕರು | 9900831586 |
| ಶ್ರೀ ಗೋವಿಂದರಾಜು | ಅತಿಥಿ ಉಪನ್ಯಾಸಕರು | 9535815935 |
| ಡಾ. ವೀರೇಶ ಎಂ. | ಅತಿಥಿ ಉಪನ್ಯಾಸಕರು | 6361597319 |
| ಡಾ. ಮಂಜುನಾಥ ಎನ್.ಪಿ. | ಅತಿಥಿ ಉಪನ್ಯಾಸಕರು | 9743544598 |
| **ಪತ್ರಿಕೋದ್ಯಮ ವಿಭಾಗ** | | |
| ಡಾ. ಪದ್ಮನಾಭ ಕೆ.ವಿ. | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9449525854 |
| ಶ್ರೀಮತಿ. ಕೋಕಿಲ ಎಂ.ಎಸ್. | ಅತಿಥಿ ಉಪನ್ಯಾಸಕರು | 8618079108 |
| ಡಾ. ವಿನಯ್ ಕುಮಾರ್ ಎಸ್.ಎಸ್. | ಅತಿಥಿ ಉಪನ್ಯಾಸಕರು | 9964103366 |
| **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ** | | |
| ಶ್ರೀ. ವಿನಯ್ ಆರ್ ಎಸ್ | ಅತಿಥಿ ಉಪನ್ಯಾಸಕರು | 8746984435 |
| **ಮನಃಶಾಸ್ತ್ರ ವಿಭಾಗ** | | |
| ಶ್ರೀಮತಿ. ಪೂಜ ಎಸ್ ಮೂರ್ತಿ | ಅತಿಥಿ ಉಪನ್ಯಾಸಕರು | 8792304263 |
| **ಉರ್ದು ವಿಭಾಗ** | | |
| ಶ್ರೀಮತಿ. ಜಬೀನ್ ಕೌಸರ್ | ಅತಿಥಿ ಉಪನ್ಯಾಸಕರು | 8618782744 |
| **ಸಂಸ್ಕೃತ ವಿಭಾಗ** | | |
| ಡಾ. ಸುಬ್ರಹ್ಮಣ್ಯಶಾಸ್ತ್ರಿ ಡಿ.ವಿ. | ಅತಿಥಿ ಉಪನ್ಯಾಸಕರು | 9535890368 |
| **ಪರಿಸರ ವಿಜ್ಞಾನ ವಿಭಾಗ** | | |
| | | |
| **ಸಮಾಜಕಾರ್ಯ ವಿಭಾಗ** | | |
| ಶ್ರೀ. ಭಾನುನಂದ ಬಿ ಸಿ | ಅತಿಥಿ ಉಪನ್ಯಾಸಕರು | 7619482553 |
| ಶ್ರೀ. ಹೇಮಂತ ಕುಮಾರ್ ಕೆ ಪಿ | ಅತಿಥಿ ಉಪನ್ಯಾಸಕರು | 9008793362 |
| ಶ್ರೀ ಪ್ರಹ್ಲಾದ ಜಿ. | ಅತಿಥಿ ಉಪನ್ಯಾಸಕರು | 9739392011 |
| ಶ್ರೀ ಸಿ.ಎಂ.ಎಸ್. ಗೌಡ | ಅತಿಥಿ ಉಪನ್ಯಾಸಕರು | 9164645665 |
| ಶ್ರೀಮತಿ. ಅಶ್ವಿನಿ ಎಂ. | ಅತಿಥಿ ಉಪನ್ಯಾಸಕರು | 9686515620 |
| ಶ್ರೀ. ಸಿದ್ದೇಶ್ ಸಿ | ಅತಿಥಿ ಉಪನ್ಯಾಸಕರು | 9964110203 |
| **ವಾಣಿಜ್ಯಶಾಸ್ತ್ರ ಹಾಗೂ ನಿರ್ವಹಣಾ ವಿಭಾಗ** | | |
| ಡಾ. ಸುರೇಶ್ ಬಿ.ಕೆ. | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9845142321 |
| ಶ್ರೀ ಚಂದ್ರಮೌಳಿ | ಸಹಾಯಕ ಪ್ರಾಧ್ಯಾಪಕರು | 9880256776 |
| ಡಾ. ನಾಗರಾಜು ಆರ್.ಸಿ. | ಸಹಾಯಕ ಪ್ರಾಧ್ಯಾಪಕರು | 9845142321 |

| | | |
|---|---|---|
| ಡಾ. ವನಜಾಕ್ಷಿ ಇ. | ಸಹಾಯಕ ಪ್ರಾಧ್ಯಾಪಕರು | 9353646558 |
| ಡಾ. ಸಿ. ಶೋಭಾ | ಸಹಾಯಕ ಪ್ರಾಧ್ಯಾಪಕರು | 9481436066 |
| ಡಾ. ಶ್ರೀನಿವಾಸ ಮೂರ್ತಿ ಎಂ.ಡಿ. | ಸಹಾಯಕ ಪ್ರಾಧ್ಯಾಪಕರು | 9743377274 |
| ಡಾ. ಸಲ್ಮಾಬಾನು | ಸಹಾಯಕ ಪ್ರಾಧ್ಯಾಪಕರು | 9741018137 |
| ಶ್ರೀಮತಿ. ಕವಿತಮ್ಮ ಪಿ | ಅತಿಥಿ ಉಪನ್ಯಾಸಕರು | 8197144944 |
| ಶ್ರೀ ಬಸವಲಿಂಗಯ್ಯ | ಅತಿಥಿ ಉಪನ್ಯಾಸಕರು | 9036550255 |
| ಕು. ಫಾತಿಮಾ ಜೆಹ್ರಾ | ಅತಿಥಿ ಉಪನ್ಯಾಸಕರು | 9380674606 |
| ಕು. ನಂದಿನಿ ಕೆ.ವಿ. | ಅತಿಥಿ ಉಪನ್ಯಾಸಕರು | 8197854099 |
| ಶ್ರೀ ವಾಸುದೇವ ಡಿ.ಎಂ. | ಅತಿಥಿ ಉಪನ್ಯಾಸಕರು | 9740908059 |
| ಶ್ರೀ ಅಶೋಕ ಹೆಚ್.ಎಲ್. | ಅತಿಥಿ ಉಪನ್ಯಾಸಕರು | 8861570478 |
| ಶ್ರೀ ನವೀನ್ ಕೆ. | ಅತಿಥಿ ಉಪನ್ಯಾಸಕರು | 9739302087 |
| ಶ್ರೀಮತಿ. ಪುಷ್ಪಲತ ಎಂ.ಪಿ. | ಅತಿಥಿ ಉಪನ್ಯಾಸಕರು | 8762263074 |
| ಶ್ರೀಮತಿ. ಆರಾಧನ ಎನ್.ಎಂ. | ಅತಿಥಿ ಉಪನ್ಯಾಸಕರು | 9845138806 |
| ಶ್ರೀಮತಿ. ಲಾವಣ್ಯ ಎಸ್. | ಅತಿಥಿ ಉಪನ್ಯಾಸಕರು | 7996083266 |
| ಕು. ಹುಸ್ನಾತಾಜ್ | ಅತಿಥಿ ಉಪನ್ಯಾಸಕರು | 8722108157 |
| ಕು. ತೇಜಸ್ವಿನಿ ಎಸ್. | ಅತಿಥಿ ಉಪನ್ಯಾಸಕರು | 8971462504 |
| ಶ್ರೀ ಅರುಣ್ ಕುಮಾರ್ ಕೆ. | ಅತಿಥಿ ಉಪನ್ಯಾಸಕರು | 8660981607 |
| ಶ್ರೀ ಅರುಣ್ ಕುಮಾರ್ ಹೆಚ್. | ಅತಿಥಿ ಉಪನ್ಯಾಸಕರು | 8861270557 |
| ಶ್ರೀ ಯೋಗೀಶ್‌ಚಾರ್ | ಅತಿಥಿ ಉಪನ್ಯಾಸಕರು | 9591746466 |
| ಕು. ಮಂಜುಳದೇವಿ ಹೆಚ್.ಎಸ್. | ಅತಿಥಿ ಉಪನ್ಯಾಸಕರು | 7829632476 |
| ಶ್ರೀಮತಿ. ಸೌಮ್ಯ ಟಿ.ಎನ್. | ಅತಿಥಿ ಉಪನ್ಯಾಸಕರು | 9980600654 |
| ಶ್ರೀ ಧರಣೇಂದ್ರ ಬಿ | ಅತಿಥಿ ಉಪನ್ಯಾಸಕರು | 7090520912 |
| ಕು. ಅಶ್ವಿನಿ ಜಿ | ಅತಿಥಿ ಉಪನ್ಯಾಸಕರು | 7975446083 |
| ಶ್ರೀಮತಿ. ದಿವ್ಯ ಹೆಚ್.ಪಿ. | ಅತಿಥಿ ಉಪನ್ಯಾಸಕರು | 9964705159 |
| ಕು. ಉಮಾ ಪಿ.ಎಂ. | ಅತಿಥಿ ಉಪನ್ಯಾಸಕರು | 6362057627 |
| ಕು. ಮಹಾಲಕ್ಷ್ಮೀ ಎನ್. | ಅತಿಥಿ ಉಪನ್ಯಾಸಕರು | 9380730097 |
| ಶ್ರೀಮತಿ. ರಶ್ಮಿ. ಹೆಚ್.ಎನ್. | ಅತಿಥಿ ಉಪನ್ಯಾಸಕರು | 9916724522 |
| ಶ್ರೀಮತಿ. ಸಿಂಧು ಎಂ. | ಅತಿಥಿ ಉಪನ್ಯಾಸಕರು | 9611057853 |
| **ಪರಿಸರ ವಿಜ್ಞಾನ ವಿಭಾಗ** | | |
| ಶ್ರೀಮತಿ. ಚಂದನ ಕೆ. | ಅತಿಥಿ ಉಪನ್ಯಾಸಕರು | 9148895904 |
| ಕು. ವೀಣಾ ಹೆಚ್.ಆರ್. | ಅತಿಥಿ ಉಪನ್ಯಾಸಕರು | 7259477128 |
| **ದೃಶ್ಯಕಲಾ ವಿಭಾಗ** | | |
| ಪ್ರೊ. ಕರಿಯಣ್ಣ ಬಿ. | ಮುಖ್ಯಸ್ಥರು | 6362854252 |
| **ಕ್ರೀಡಾ ವಿಭಾಗ** | | |
| ಡಾ. ಸುದೀಪ್ ಕುಮಾರ್ ಆರ್. | ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು | 8904131981 |
| **ಗ್ರಂಥಾಲಯ ವಿಭಾಗ** | | |
| ಡಾ. ಸುಮಾದೇವಿ ಎಸ್. | ಸಹಾಯಕ ಗ್ರಂಥಪಾಲಕರು | 9480849040 |

# ಬೋಧಕೇತರ ವರ್ಗ

| ಹೆಸರು | ಹುದ್ದೆ | ದೂರವಾಣಿ |
|---|---|---|
| ಖಾಯಂ ನೌಕರರು | | |
| ಶ್ರೀ ಸುರೇಶಾಚಾರಿ ವಿ. | ಅಧೀಕ್ಷಕರು | 8147872848 |
| ಶ್ರೀಮತಿ. ಗಾಯತ್ರಿ ಬಿ | ಪ್ರಥಮ ದರ್ಜೆ ಸಹಾಯಕರು | 9844405449 |
| ಶ್ರೀಮತಿ. ಗಿರಿಜಾಲಕ್ಷ್ಮೀ | ಗ್ರಂಥಾಲಯ ಸಹಾಯಕರು | 9902950329 |
| ಶ್ರೀ ಬಸವರಾಜ ಪಿ. ಎಸ್. | ದ್ವಿತೀಯ ದರ್ಜೆ ಸಹಾಯಕರು | 9845639555 |
| ಸಂಚಿತ ವೇತನ ನೌಕರರು | | |
| ಶ್ರೀಮತಿ. ಪದ್ಮಾವತಿ ಟಿ.ಎನ್. | ಶೀಘ್ರಲಿಪಿಗಾರರು | 8073513980 |
| ಶ್ರೀ. ರಾಜಣ್ಣ ಬಿ | ದ್ವಿತೀಯ ದರ್ಜೆ ಸಹಾಯಕರು | 9916525224 |
| ಶ್ರೀ ಸುರೇಶ್ | ದ್ವಿತೀಯ ದರ್ಜೆ ಸಹಾಯಕರು | 9886322143 |
| ಶ್ರೀಮತಿ ರಮಾಮಣಿ ಜಿ.ಎನ್. | ಪರಿಚಾರಕರು | 9148201670 |
| ಹೊರಗುತ್ತಿಗೆ ನೌಕರರು | | |
| ಶ್ರೀಮತಿ ಮಂಜುಳಾ ಎಸ್ ಜಿ | ಡೇಟಾ ಎಂಟ್ರಿ ಆಪರೇಟರ್ | 9686022465 |
| ಶ್ರೀ ಧನಂಜಯ ಆರ್ | ಪರಿಚಾರಕರು | 7019645986 |